ನೆಲಮಂಗಲ ಯೋಜನಾ ಪ್ರಾಧಿಕಾರ
Nelamangala Planning Authority

2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ
(ದಿನಾಂಕ:01–04–2016 ರಿಂದ 31–03–2017 ರವರೆಗೆ)

Audit Report for the year **2016-17**

(For the Period From:01-04-2016 to 31-03-2017)

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಬೆಂಗಳೂರು ಗ್ರಾಮಾಂತರ ಜಿಲ್ಲೆ.
Web: www.npa.in

2nd Main Road, Sadashivanagar, Nelamangala- 562123
Bangalore Rural District
website. www.npa.in

ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ

ಕ್ರ ಸ	ವರ್ಷವಾರು ಲೆಕ್ಕ ಪರಿಶೋಧನೆ ಪೂರ್ಣಗೊಳಿಸಿ ಸಿದ್ದಪಡಿಸಬೇಕಾದ ವರ್ಷ	ವರ್ಷವಾರು ಲೆಕ್ಕ ಪರಿಶೋಧನಾ ವರದಿಯನ್ನು ಸಿದ್ದಪಡಿಸಿದ ದಿನಾಂಕ	ವಿಳಂಬಕ್ಕೆ ಕಾರಣಗಳು ಯಾವುದಾದರೂ ಇದ್ದರೆ	ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರಿಗೆ ಪರಿಶೋಧನೆ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ	ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರು ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ	ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯಿಂದ ಲೆಕ್ಕ ಪರಿಶೋಧನೆಯ ಪ್ರಮಾಣ ಪತ್ರವನ್ನು ಸ್ವೀಕರಿಸಿದ ಉಲ್ಲೇಖ ಮತ್ತು ದಿನಾಂಕ	ಅವುಗಳನ್ನು ಮುದ್ರಣಕ್ಕಾಗಿ ನೀಡಿದ ಮತ್ತು ಮುದ್ರಿತ ಪ್ರತಿಗಳನ್ನು ಪಡೆದ ದಿನಾಂಕ	ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ
1	**2**	**3**	**4**	**5**	**6**	**7**	**8**	**9**
1.	2016–17	17–08–2017	ವರದಿಯು ಪ್ರಾಧಿಕಾರದ ಕಛೇರಿಗೆ ವಿಳಂಬವಾಗಿ ಸ್ವೀಕೃತ ವಾಗಿರುತ್ತದೆ	ಇಲ್ಲ	22–05–2017 ರಿಂದ 27–05–2017 ಪುನರ್ ಪರಿಶೀಲನಾ ದಿನಾಂಕ:17–08–2017	ಸಂಖ್ಯೆ.ಸ್ಥಲೆಪವ:ಬೆಂ:ಕಾವಿ:2017–18/293 ದಿನಾಂಕ:17–08–2017 (ಈ ಕಛೇರಿ ಸ್ವೀಕೃತಿ ದಿನಾಂಕ:16–03–2018).	ಅಚ್ಚಿಗಾಗಿ (ಮುದ್ರಣಕ್ಕಾಗಿ) ನೀಡಿದ ದಿನಾಂಕ: 31–03–2019 ಮತ್ತು ವಾಪಸ್ಸು ಪಡೆದ ದಿನಾಂಕ: 12–04–2019	ಸಂಖ್ಯೆ.ನೆಯೋಪ್ರಾ: ಸಿಬ್ಬಂದಿ:ಲೆತ:01:2017–18 ದಿನಾಂಕ: 16–04–2019

ಸಹಿ/–
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಸದಸ್ಯ–ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಈ ಪ್ರಾಧಿಕಾರದ 2016–17 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳು ಹಾಗೂ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರಗಳು.

ಕ್ರ.ಸಂ	ಕಂಡಿಕೆ ಸಂಖ್ಯೆ	ಪ್ರಮುಖವಾದ ನ್ಯೂನತೆಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	04	ಹಿಂದಿನ ಸಾಲಿನ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು.	–	–
2.	18	ರಸೀದಿಗಳಿಂದ ವಸೂಲಿಸಿದ ಚೆಕ್ / ಡಿಡಿ ಮೊತ್ತಗಳನ್ನು ವಿಳಂಬವಾಗಿ ಜಮೆ ಮಾಡಿರುವುದು.	–	–
3.	24	M.P (P) Map, CD,Z.R & A3 size colour map book ಮಾರಾಟ ದಾಸ್ತಾನು ವಿತರಣೆ ನಿರ್ವಹಿಸದಿರುವುದು.	–	–
4.	26	ಸಿ.ಎ. ನಿವೇಶನ ಪಾರ್ಕ್‌ಗಳ ವಿವರಗಳನ್ನು ಹಾಜರುಪಡಿಸದೇ ಇರುವುದು.	–	–
5.	27	ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಬಡಾವಣೆಗಳು 5 ವರ್ಷ ವಾದರೂ ಅಭಿವೃದ್ಧಿಪಡಿಸದೇ ಇರುವುದು.	–	–
6.	29	ಬಡಾವಣೆ ನಕ್ಷೆ ಅನುಮೋದನೆ ನೀಡುವಾಗ ನಿಯಮ ಉಲ್ಲಂಘಿಸಿ ಕಡಿಮೆ ಉತ್ತಮತೆ ಶುಲ್ಕ ವಸೂಲಿಸಿರುವುದು.	175447000	–
7.	30	ನಿವೇಶನ ಉತ್ತಮತೆ ಶುಲ್ಕ ವಿಧಿಸದೇ ಕೈ ಬಿಟ್ಟಿರುವುದು.	–	4985
8.	31	ವಸತಿ ಉದ್ದೇಶಕ್ಕಾಗಿ ಕಟ್ಟಡ ನಿರ್ಮಿಸಲು ಪ್ರಾರಂಭಿಕ ಪತ್ರ ವಿತರಿಸುವಾಗ ಕಡಿಮೆ ಉತ್ತಮತೆ ಶುಲ್ಕ ವಿಧಿಸಿರುವುದು.	–	1277
9.	32	ದಿನವಹಿಯನ್ನು ನಿರ್ವಹಿಸದಿರುವುದು.	–	–
10.	36	ಪಿಂಚಣಿ ವಂತಿಕೆಯನ್ನು ಕಡಿಮೆ ಜಮೆ ಮಾಡಿರುವುದು.	223658	–
		ಒಟ್ಟು	**175670658**	**6262**

ಸಹಿ/–

ಹಿರಿಯ ಉಪ ನಿರ್ದೇಶಕರು,

ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,

ಬೆಂಗಳೂರು.

ಭಾಗ–1

ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ 2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

1. ಪೀಠಿಕೆ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ನಿಯಮ 1961 ಭಾಗ 68ಸಿ (2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965 ರ ನಿಯಮ 23 (1) ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರದ 2016–17 ನೇ ಸಾಲಿನ ಲೆಕ್ಕ ತನಿಕೆಯನ್ನು ಕೈಗೊಂಡಿದ್ದು ಪರಿಶೀಲನಾ ವೇಳೆಯಲ್ಲಿ ಕಂಡು ಬಂದ ಪ್ರಮುಖವಾದ ನ್ಯೂನತೆಗಳು ಆಕ್ಷೇಪಣೆ/ ವಸೂಲಾತಿ ಮೊತ್ತಗಳನ್ನು ಈ ವರದಿಯ ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದ್ದು ವರದಿಯ ಕಂಡಿಕೆಗಳ ನ್ಯೂನತೆಗಳಿಗೆ ಸೂಕ್ತ ಉತ್ತರಗಳೊಂದಿಗೆ ಅನುಸರಣಾ ವರದಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಮೂಲಕ ಶಿಫಾರಸ್ಸು ಮಾಡಿ ನಿಗಧಿತ ಅವಧಿಯೊಳಗೆ ಸಲ್ಲಿಸಲು ಸೂಚಿಸಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ:63:ಡಿಟಿಸಿ:96 ದಿನಾಂಕ:27–01–1997 ರಂತೆ ದಿನಾಂಕ:31–08–2001 ರಿಂದ ನೆಲಮಂಗಲ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಯೋಜಿತ ಬೆಳವಣಿಗೆಗಳನ್ನು ನಿಯಂತ್ರಿಸಿ, ಹಾಗೂ ಬೆಳವಣಿಗೆಯ ಧ್ಯೆಯ ಸಾಧಿಸುವ ನಿಟ್ಟಿನಲ್ಲಿ ಈ ಯೋಜನಾ ಪ್ರಾಧಿಕಾರವನ್ನು ಪ್ರಾರಂಭ ಮಾಡಲಾಗಿದೆ.

ಈ ಯೋಜನೆಯ ಮುಖ್ಯ ಉದ್ದೇಶ ಯೋಜನಾ ಬದ್ದ ಭೂ ಉಪಯೋಗ ಮತ್ತು ಅಭಿವೃದ್ಧಿ ಯೋಜಿತ ನಿಯಂತ್ರಣ, ಅನುಷ್ಠಾನ, ಮಹಾ ಯೋಜನೆಯ ತಯಾರಿಕೆ ಮತ್ತು ಪರಿಷ್ಕರಣೆಯಾಗಿರುತ್ತದೆ.

2. ಲೆಕ್ಕ ತಪಾಸಣಾ ತಂಡದ ವಿವರಗಳು:

1.	ಲೆಕ್ಕ ಪರಿಶೋಧಕರ ಹೆಸರು	ಶ್ರೀ.ಎ.ಎನ್.ರಾಮಕೃಷ್ಣಯ್ಯ
2.	ಲೆಕ್ಕ ಪರಿಶೋಧಕರ ಹೆಸರು	ಶ್ರೀ.ಎಂ.ನಾಗೇಶ್
3.	ಲೆಕ್ಕ ಪರಿಶೋಧನಾ ಅವಧಿ	2016–17 01–04–2016 ರಿಂದ 31–03–2017
4.	ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ	22–05–2017
5.	ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ	27–05–2017
6.	ಉಪಯೋಗಿಸಿದ ಮಾನವ ದಿನಗಳು	12 ಏಕ ಮಾನವ ದಿನಗಳು
7.	ಪುನರ್ ಪರಿಶೀಲನಾ ಅಧಿಕಾರಿಗಳು	ಶ್ರೀ.ಎನ್.ಬಿ.ಶಿವರುದ್ರಪ್ಪ, ಅಪರ ನಿರ್ದೇಶಕರು
8	ಪುನರ್ ಪರಿಶೀಲನಾ ದಿನಾಂಕ	17–08–2017

3. ಸಂಸ್ಥೆಯ ಆಡಳಿತ ವರ್ಗದ ವಿವರಗಳು:

ಕ್ರ.ಸಂ	ಪದನಾಮ	ಹೆಸರು ಶ್ರೀಮತಿ/ಶ್ರೀಯುತರು	ದಿನಾಂಕ	
1.	ಅಧ್ಯಕ್ಷರು	1) ಶ್ರೀ.ಚಿನ್ನರಂಗೇಗೌಡ	01–04–2016	27–08–2016
		2) ಮಹಾನಗರ ಆಯುಕ್ತರು, ಬಿಎಂಆರ್‌ಡಿಎ, ಬೆಂಗಳೂರು	28–08–2016	29–12–2016
		3) ಶ್ರೀ.ಡಿ.ಎಂ.ಪ್ರಕಾಶ್	30–12–2016	31–03–2017

2.	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ–ಕಾರ್ಯದರ್ಶಿ	1) ಶ್ರೀಮತಿ ಎನ್.ವೀಣಾ 2) ಶ್ರೀಮತಿ.ಎನ್.ಹೆಚ್.ಸುಮ	01–04–2016 05–01–2017	04–01–2017 31–03–2017
3.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	1) ಶ್ರೀ.ಕೆ.ಶ್ರೀವಲ್ಲಭವೈದ್ಯ	01–04–2016	31–03–2017
4.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	1) ಶ್ರೀ ಕೆ.ಎಸ್.ಮಹೇಶ್ವರಪ್ಪ	01–04–2016	31–03–2017
5.	ನಗರ ಯೋಜಕರು	1) ಶ್ರೀ.ಡಿ.ಎಲ್.ಮಂಜುನಾಥ	01–04–2016	31–03–2017
6.	ಸಹಾಯಕ ನಗರ ಯೋಜಕರು	ಖಾಲಿ	–	–
7.	ಪ್ರಥಮ ದರ್ಜೆ ಸಹಾಯಕರು/ ವಿಷಯ ನಿರ್ವಾಹಕರು	1) ಶ್ರೀ.ಬಿ.ಆರ್.ಗಿರೀಶ್	01–04–2016	31–03–2017

4. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು :–

ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 27 ರಂತೆ ಲೆಕ್ಕ ತನಿಖೆಯ ವರದಿಯು ಬಿಡುಗಡೆಯಾದ 3 ತಿಂಗಳೊಳಗೆ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ನ್ಯೂನತೆಗಳು ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಬಗ್ಗೆ ಪ್ರಾಧಿಕಾರವು ಸೂಕ್ತ ಕ್ರಮ ಕೈಗೊಂಡು ಅನುಸರಣಾ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಕ್ಷಮ ಪ್ರಾಧಿಕಾರದ ಮೂಲಕ ಕಂಡಿಕೆಗಳ ತಿರುವಳಿಗಾಗಿ ಸಲ್ಲಿಸಬೇಕಾಗಿರುತ್ತದೆ.

ಪ್ರಾಧಿಕಾರದಲ್ಲಿ ಆಡಿಟ್ ಮಿನಿಟ್ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಹಿಂದಿನ ಸಾಲುಗಳ ವರದಿಗಳಲ್ಲಿ ಪ್ರಸ್ತಾಪಿಸಲಾಗಿದ್ದರೂ ವಹಿಯನ್ನು ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಪ್ರಾಧಿಕಾರವು ಕೂಡಲೇ ಅಗತ್ಯ ಕ್ರಮ ವಹಿಸುವುದು ಸೂಕ್ತವಾಗಿರುತ್ತದೆ. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳನ್ನು ಅವಲೋಕಿಸಿದಾಗ ಸದರಿ ಪ್ರಾಧಿಕಾರದ 2001–02 ರಿಂದ 2016–17 ನೇ ಸಾಲಿನವರೆಗೆ ವರದಿಗಳಲ್ಲಿ ಸುಮಾರು ರೂ.3449333–00 ಗಳ ಆಕ್ಷೇಪಣೆ ಮೊತ್ತವು ರೂ.28556–00 ಗಳ ವಸೂಲಾತಿ ಮೊತ್ತವು ತೀರುವಳಿಯಾಗದೆ ಬಾಕಿ ಉಳಿದಿರುವುದು ಕಂಡು ಬಂದಿರುತ್ತದೆ. ಈ ರೀತಿ ವರ್ಷಾನುಗಟ್ಟಲೆ ತೀರುವಳಿಗೆ ಕ್ರಮ ಕೈಗೊಳ್ಳದಿರುವುದು ಅಧಿಕಾರಿಗಳು / ಸಿಬ್ಬಂದಿಗಳು ವಯೋನಿವೃತ್ತಿ ವರ್ಗಾವಣೆ ಮತ್ತು ಅಕಾಲಿಕ ಮರಣಗಳು ಸಂಭವಿಸುವುದರಿಂದ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳು ತೀರುವಳಿಯಾಗದೇ ಹಾಗೆಯೇ ಮುಂದುವರೆದಿದ್ದು ಇದರಿಂದ ಸಂಸ್ಥೆಗೆ ಆರ್ಥಿಕವಾಗಿ ನಷ್ಟವಾಗುವ ಸಂಭವವಿರುತ್ತದೆ. ಈ ಹಿನ್ನಲೆಯಲ್ಲಿ ಪ್ರತಿ ವರ್ಷ ನಿಯಮಾನುಸಾರ ಅನುಸರಣಾ ವರದಿಗಳನ್ನು ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸುವುದರ ಜೊತೆಗೆ ತೀರುವಳಿಗಳಿಗೆ ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ.

ದಿನಾಂಕ:31–03–2017 ಕ್ಕೆ ಬಾಕಿ ಇದ್ದ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ಕಂಡಿಕೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ	ಅವಧಿ	31–03–2017 ಕ್ಕೆ ಬಾಕಿ ಇರುವ ಆಕ್ಷೇಪಣೆ/ವಸೂಲಾತಿ ವಿವರ			
		ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ, ರೂ
1.	2001–02 ರಿಂದ 2004–05	6	1187369	3	8666
2.	2005–06	2	135000	3	5196
3.	2006–07	2	51875	2	5510

4.	2007–08	3	1911060	4	9184
5.	2008–09	3	164029	–	–
6.	2009–2010	–	–	–	–
7.	2010–2011	–	–	–	–
8.	2011–2012	–	–	–	–
9.	2012–2013	–	–	–	–
10.	2013–2014	–	–	–	–
11.	2014–2015	–	–	–	–
12.	2015–2016	–	–	–	–
	ಒಟ್ಟು	**16**	**3449333**	**12**	**28556**

ಭಾಗ–2

5. ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆ ಕುರಿತು:

2016–17 ನೇ ಸಾಲಿನ ಲೆಕ್ಕ ಪರಿಶೋಧನೆಯು ಪ್ರಾರಂಭಿಸಿದ ದಿನಾಂಕ:22–05–2017 ರಂದು ಈ ಕೆಳಕಂಡ ಶಿಲ್ಕುಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿದ್ದು ಸಂಬಂಧಿಸಿದ ವಹಿಗಳ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

1.	ನಗದು ಮೊತ್ತ ರೂ.	435–00
2.	ಉಪಯೋಗಿಸದೆ ಇರುವ ಧನಾಧೇಶ ಪುಸ್ತಕಗಳು	ಇರುವುದಿಲ್ಲ
3.	ಅಂಚೆ ಚೀಟಿಗಳು ರೂ.	1451–00
4.	ರಸೀದಿ ಪುಸ್ತಕಗಳು:–	(ಎ) ಸಾಮಾನ್ಯ ರಸೀದಿ ಪುಸ್ತಕ 23 ರಸೀದಿ ಪುಸ್ತಕಗಳು (ಸಂಖ್ಯೆ: 148 ರಿಂದ 171 ರಸೀದಿಗಳ ಸಂಖ್ಯೆ: 7351 ರಿಂದ 8500)
		(ಬಿ) ಅಕ್ರಮ ಸಕ್ರಮ ರಸೀದಿ ಪುಸ್ತಕಗಳು 09 ರಸೀದಿ ಪುಸ್ತಕ ಸಂಖ್ಯೆ: 12 ರಿಂದ 20 ರಸೀದಿಗಳ ಸಂಖ್ಯೆ: 1101 ರಿಂದ 2000

5(ಅ): ಅಂಚೆ ಚೀಟಿ ವಹಿವಾಟುಗಳ ವಿವರ:

(ರೂ.ಗಳಲ್ಲಿ)

01–04–2016 ಕ್ಕೆ ಪ್ರಾರಂಭಿಕ ಶಿಲ್ಕು	1718
2016–17 ನೇ ಸಾಲಿಗೆ ಸ್ವೀಕೃತಿ/ ಖರೀದಿ	16000
ಒಟ್ಟು	**17718**
2016–17 ನೇ ಸಾಲಿಗೆ ಉಪಯೋಗ	16037
31–03–2017 ರ ಅಖೈರು ಶಿಲ್ಕು	1681

6. ಆಯವ್ಯಯ:

ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 22 ರಂತೆ ಪ್ರತಿ ಸಾಲಿನ ಜನವರಿ ಮಾಹೆಯಲ್ಲಿ ಆಯವ್ಯಯವನ್ನು ತಯಾರಿಸಿ ಪ್ರಾಧಿಕಾರದ ಸಭೆಯ ಅನುಮೋದನೆ ಪಡೆದು ಸರ್ಕಾರಕ್ಕೆ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸಬೇಕಾಗಿರುತ್ತದೆ. ಈ ನಿಯಮದಂತೆ 2016–17 ನೇ ಸಾಲಿನ ಆಯವ್ಯಯವನ್ನು ಸದರಿ ಪ್ರಾಧಿಕಾರದಲ್ಲಿ ತಯಾರಿಸಿ ದಿನಾಂಕ:02–01–2016 ರಂದು ನಡೆದ ಪ್ರಾಧಿಕಾರದ 76 ನೇ ಸಭೆಯ ನಡವಳಿಯ ವಿಷಯ ಸಂಖ್ಯೆ–65 ರಲ್ಲಿ ಮಂಡಿಸಿ ಚರ್ಚಿಸಿ ಅನುಮೋದನೆ ಪಡೆದು ಪ್ರಾಧಿಕಾರದ ಪತ್ರ ಸಂಖ್ಯೆ:ನೆಯೋಪ್ರಾ:ಸಿಬ್ಬಂದಿ:ಆಯವ್ಯಯ:2016–17/2356 ದಿನಾಂಕ:27–01–2016 ರ ಮೂಲಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಲಾಗಿದ್ದು, ದಿನಾಂಕ:27–12–2016 ರಂದು ಸರ್ಕಾರದ ಅನುಮೋದನೆಯನ್ನು ನೀಡಲಾಗಿರುತ್ತದೆ.

2016–17 ನೇ ಸಾಲಿನ ಆಯವ್ಯಯದ ವಿವರ ಈ ಕೆಳಕಂಡಂತಿದೆ. (ಸಂಸ್ಥೆಯವರು ನೀಡಿದ ಕಡತದಲ್ಲಿನ ಮಾಹಿತಿಯಂತೆ)

(ರೂ.ಗಳಲ್ಲಿ)

2016–17 ಕ್ಕೆ ಪ್ರಾರಂಭಿಕ ಶಿಲ್ಕು	51930974
2016–17 ನೇ ಸಾಲಿನಲ್ಲಿ ಅಂದಾಜು ಸ್ವೀಕೃತಿ	504467701
ಒಟ್ಟು ರೂ.	556398675
2016–17 ರಲ್ಲಿ ಅಂದಾಜು ವೆಚ್ಚ	256340000
31–03–2017 ಕ್ಕೆ ಅಂತಿಮ ಶಿಲ್ಕು	300058675

ಆಯವ್ಯಯದ ಅಂದಾಜು ಆದಾಯ ಮತ್ತು ವೆಚ್ಚಕ್ಕೂ ಹಾಗೂ ವಾಸ್ತವಿಕ ಆದಾಯ ಮತ್ತು ವೆಚ್ಚಕ್ಕೆ ಬಹಳಷ್ಟು ವ್ಯತ್ಯಾಸ ಕಂಡಬಂದಿದ್ದು, ಆಯವ್ಯಯವನ್ನು ತಯಾರಿಸುವಾಗ ಹಿಂದಿನ 3 ವರ್ಷದ ಆದಾಯ ಮತ್ತು ವೆಚ್ಚಕ್ಕೆ ಸರಾಸರಿಯನ್ನು ತೆಗೆದು ಕೊಂಡು ಶೇಕಡಾ 15% ರಷ್ಟು ಹೆಚ್ಚಿಸಿಕೊಂಡು ಅಂದಾಜು ಆದಾಯ ವೆಚ್ಚವನ್ನು ತಯಾರಿಸಿಕೊಳ್ಳಲು ಸೂಚಿಸಿದೆ.

7. ಆರ್ಥಿಕ ಪರಿಸ್ಥಿತಿ:

ಪ್ರಾಧಿಕಾರದ ನಗದು ಪುಸ್ತಕ ಮತ್ತು ಆರ್ಥಿಕ ವಹಿವಾಟು ನಡೆಸಿರುವ ಬ್ಯಾಂಕ್ ಪಾಸ್ ಪುಸ್ತಕ / ಪಾಸ್ ಶೀಟ್‌ಗಳ ಪರಿಶೀಲನೆಯಲ್ಲಿ ಸಂಸ್ಥೆಯು ವಿವಿಧ ಬ್ಯಾಂಕ್‌ಗಳಲ್ಲಿ ಒಟ್ಟು 4 ಖಾತೆಗಳನ್ನು ಹೊಂದಿದ್ದು ಅವುಗಳ ಕ್ರೋಢೀಕೃತ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಕಂಡಂತೆ ನೀಡಲಾಗಿದೆ.

(ರೂ.ಗಳಲ್ಲಿ)

ದಿ:01–04–2016 ಕ್ಕೆ ಪ್ರಾರಂಭಿಕ ಶಿಲ್ಕು	19045189
2016–17 ನೇ ಸಾಲಿನ ಜಮೆ	732591491
ಒಟ್ಟು ರೂ.	751636680
2016–17 ನೇ ಸಾಲಿನ ವೆಚ್ಚ	634772176
ದಿ:31–03–2017 ರ ಅಂತ್ಯಕ್ಕೆ ಅಂತಿಮ ಶಿಲ್ಕು	116864504

ಲೆಕ್ಕ ಸಮನ್ವಯ:

(ರೂ.ಗಳಲ್ಲಿ)

ದಿ:31–03–2017 ರ ಅಂತ್ಯಕ್ಕೆ ನಗದು ವಹಿಯಂತೆ ಅಂತಿಮ ಶಿಲ್ಕು	116864504
ದಿ:31–03–2017 ರ ಅಂತ್ಯಕ್ಕೆ ಹೊಂದಾಣಿಕೆಯಾಗದಿರುವ ಡಿ.ಡಿ.ಗಳು	(–) 678
ಒಟ್ಟು ರೂ	**116863826**
ದಿ:31–03–2017 ರ ಅಂತ್ಯಕ್ಕೆ ನಗದಾಗದಿರುವ ಚೆಕ್‌ಗಳು	(+) 16750
ಒಟ್ಟು	**116880576**
ವ್ಯತ್ಯಾಸ	ಇಲ್ಲ

ದಿನಾಂಕ:31–03–2017 ರ ಅಂತ್ಯಕ್ಕೆ ಹೊಂದಾಣಿಕೆಯಾಗದ ಡಿಡಿ / ಚೆಕ್‌ಗಳ ವಿವರ ಅನುಬಂಧ–1 ರಲ್ಲಿ ವರದಿಯಲ್ಲಿ ಲಗತ್ತಿಸಿದೆ.

ಪ್ರಾಧಿಕಾರವು ಹೊಂದಿರುವ ನಾಲ್ಕು ಬ್ಯಾಂಕ್‌ಗಳ ಉಳಿತಾಯ ಖಾತೆಗಳಲ್ಲಿನ ಆರ್ಥಿಕ ವಹಿವಾಟು ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಪ್ರಾರಂಭಿಕಶಿಲ್ಕು	ಜಮೆ	ಒಟ್ಟು	ಖರ್ಚು	ಅ.ಶಿಲ್ಕು
1.	ವಿಜಯ ಬ್ಯಾಂಕ್	17812	17444924	732017751	749462675	634583293	114879382
2.	ವಿಜಯ ಬ್ಯಾಂಕ್	22332	16059	597	16656	–	16656
3.	ಎಸ್.ಬಿ.ಎಂ	605648	70503	507038	577541	188823	388718
4.	ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್	4889	1513703	66105	1579808	60	1579748
	ಒಟ್ಟು	–	**19045189**	**732591491**	**751636680**	**634772176**	**116864504**

8. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ:

2016–17 ನೇ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿರುವುದಿಲ್ಲ. ಆದರೆ ಪ್ರಾಧಿಕಾರದವರು ನೀಡಿದ ವಿವರಗಳಂತೆ 2016–17 ನೇ ಸಾಲಿನ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–2 ರಲ್ಲಿ ವರದಿಗೆ ಲಗತ್ತಿಸಲಾಗಿದೆ.

9. ಕಛೇರಿ ಕೈ ಹಣ (Imprest) ನಗದು ವಹಿ:

2016–17 ನೇ ಸಾಲಿಗೆ ಕಛೇರಿ ಕೈ ಹಣ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುತ್ತಾರೆ. ಲೆಕ್ಕ ತಪಾಸಣೆ ಪ್ರಾರಂಭಿಸಿದ ದಿನಾಂಕದಂದು ಕೈ ಹಣ ಶಿಲ್ಕು ರೂ.435–00 ಗಳಿರುತ್ತದೆ.

10. ಸಾಲಗಳು:

2016–17 ನೇ ಸಾಲಿನಲ್ಲಿ ಸಾಲಗಳ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುತ್ತಾರೆ. ಸದರಿ ಸಾಲಿನಲ್ಲಿ ಯಾವುದೇ ಸಾಲಗಳನ್ನು ಪ್ರಾಧಿಕಾರವು ಪಡೆದಿರುವುದಿಲ್ಲ.

11. ಮುಂಗಡಗಳು:

2016–17 ನೇ ಸಾಲಿನಲ್ಲಿ ಮುಂಗಡಗಳ ವಹಿಯನ್ನು ನಿರ್ವಹಿಸಿ ದೃಢೀಕರಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುತ್ತಾರೆ.
ಸದರಿ ಸಾಲಿನಲ್ಲಿ ಯಾವುದೇ ಮುಂಗಡಗಳನ್ನು ಪ್ರಾಧಿಕಾರವು ಪಡೆದಿರುವುದಿಲ್ಲ.

12. ವಾರ್ಷಿಕ ವರದಿಯ ಕುರಿತು:

ಕರ್ನಾಟಕ (ನಗರ) ಟೌನ್ ಮತ್ತು ಕಂಟ್ರಿ ಯೋಜನಾ ಆಕ್ಟ್ 1961 ರ ಕಲಂ 68 ರಡಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಾವಳಿ 1965 ರ ನಿಯಮ 29 ರಂತೆ ನಮೂನೆ–5 ರಲ್ಲಿ ಸಂಸ್ಥೆಯ ಜಮಾ ಖರ್ಚುಗಳ ತಖ್ತೆಯೊಡನೆ ವಾರ್ಷಿಕ ವರದಿಯನ್ನು ತಯಾರಿಸಿ, ಜೂನ್ 30 ರ ಮಾಹೆಯೊಳಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ಸದರಿ ಸಂಸ್ಥೆಯ ವಾರ್ಷಿಕ ವರದಿಯನ್ನು ನಿಗಧಿತ ದಿನಾಂಕದೊಳಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

13. ನಿಶ್ಚಿತ ಠೇವಣಿ ಕುರಿತು:

2016–17 ನೇ ಸಾಲಿನಲ್ಲಿ ಪ್ರಾಧಿಕಾರವು ನಿರ್ವಹಿಸಿರುವ ಹೂಡಿಕೆಗಳ ವಹಿಯನ್ನು ಪರಿಶೀಲಿಸಲಾಗಿ ಹಾಗೂ ಹೂಡಿಕೆಗಳ ವಹಿವಾಟಿಗೆ ಸಂಬಂಧಿಸಿದಂತೆ ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. ಬದಲಿಗೆ ಒಂದು ಸಾಮಾನ್ಯ ವಹಿಯಲ್ಲಿ ನಿರ್ವಹಿಸಲಾಗಿರುತ್ತದೆ. ನಿಗಧಿತ ನಮೂನೆಯಲ್ಲಿ ನಿರ್ವಹಿಸುವ ಬಗ್ಗೆ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಪ್ರಸ್ತಾಪಿಸಲಾಗಿದ್ದರೂ ಸಹ ಈ ಬಗ್ಗೆ ಅಗತ್ಯ ಕ್ರಮವಹಿಸಿರುವುದಿಲ್ಲ. ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವಾಗಿರುತ್ತದೆ. ಲೆಕ್ಕ ಪರಿಶೋಧನೆ ದಿನಾಂಕದಂದು ಪ್ರಾಧಿಕಾರದಲ್ಲಿನ ವಿವಿಧ ಬ್ಯಾಂಕುಗಳಲ್ಲಿ ತೊಡಗಿಸಿರುವ ಹೂಡಿಕೆ ಪತ್ರಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿದ್ದು, ಒಟ್ಟಾರೆ ರೂ.37,20,00,000–00 ಗಳ ಒಟ್ಟು 07 ಹೂಡಿಕೆ ಪ್ರಮಾಣ ಪತ್ರಗಳಿದ್ದು ಪರಿಶೀಲಿಸಲಾಗಿದೆ. ಸದರಿ ಸಂಬಂಧಿಸಿದ ಪಟ್ಟಿಯನ್ನು ಅನುಬಂಧ–03 ರಲ್ಲಿ ವರದಿಯೊಂದಿಗೆ ಲಗತ್ತಿಸಿದೆ.

14. ರಸೀದಿ ಪುಸ್ತಕಗಳ ವಿವರ:

2016–17 ನೇ ಸಾಲಿನಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಪ್ರಾರಂಭಿಕ ಶಿಲ್ಕಾಗಿ ಇದ್ದ / ಖರೀದಿಸಿದ ಹಾಗೂ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲಾದ ರಸೀದಿ ಪುಸ್ತಕಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ವಿವರ	ಸಾಮಾನ್ಯ ರಸೀದಿ ಪುಸ್ತಕಗಳು	ಅಕ್ರಮ ಸಕ್ರಮ ರಸೀದಿ ಪುಸ್ತಕಗಳು
1.	ದಿ:01–04–2016 ಕ್ಕೆ ಪ್ರಾರಂಭಿಕ ಉಳಿಕೆ	14	09
2.	2016–17 ನೇ ಸಾಲಿನಲ್ಲಿ ಸ್ವೀಕೃತಿ	20	–
3.	**ಒಟ್ಟು**	**34**	**09**
4.	2016–17 ನೇ ಸಾಲಿನ ಉಪಯೋಗ	9	–
5.	ದಿ:31–03–2017 ಕ್ಕೆ ಅಂತಿಮ ಉಳಿಕೆ	25	09

15(ಎ): ಭಾಗಶಃ ಉಳಿದಿದ್ದ ಹಾಗೂ ಪೂರ್ಣವಾಗಿ ಉಪಯೋಗಿಸಿದ ರಸೀದಿ ಪುಸ್ತಕಗಳ ವಿವರ:

(1) ಸಾಮಾನ್ಯ ರಸೀದಿ ಪುಸ್ತಕಗಳು:

ಕ್ರ. ಸಂ	ರಸೀದಿ ಪುಸ್ತಕ ಸಂಖ್ಯೆ		ರಸೀದಿ ಸಂಖ್ಯೆ	
	ಯಿಂದ	ವರೆಗೆ	ಯಿಂದ	ವರೆಗೆ
1.	136	–	6786	6800
2.	137	144	6801	7200

2) ಅಕ್ರಮ ಸಕ್ರಮ ರಸೀದಿ ಪುಸ್ತಕಗಳು:

ಸದರಿ ಸಾಲಿನಲ್ಲಿ ಯಾವುದು ಉಪಯೋಗ ಮಾಡಿರುವುದಿಲ್ಲ.

15. ಪ್ರಸಕ್ತ ಸಾಲಿನಲ್ಲಿ ಭಾಗಶಃ ಉಪಯೋಗಿಸಿದ ರಸೀದಿ ಪುಸ್ತಕಗಳ ವಿವರ:

2016–17 ನೇ ಸಾಲಿನಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಉಪಯೋಗಿಸಲಾದ ರಶೀದಿಗಳಲ್ಲಿ ಉಪಯೋಗಿಸಿ ರುವ ರಸೀದಿ ಪುಸ್ತಕಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ರಸೀದಿ ಪುಸ್ತಕ ಸಂಖ್ಯೆ	ಉಪಯೋಗಿಸಿದ ಕೊನೆಯ ರಸೀದಿಯ ಪುಟದ ಸಂಖ್ಯೆ / ದಿನಾಂಕ	ವಿವರ
1.	145	7230/31–03–2017	ಸಾಮಾನ್ಯ ರಸೀದಿ
2.	11	1022/30–05–2008	ಅಕ್ರಮ ಸಕ್ರಮ ರಸೀದಿ (ಸದರಿ ಸಾಲಿನಲ್ಲಿ ಉಪಯೋಗಿಸಿರುವುದಿಲ್ಲ)

16. ರಸೀದಿ ಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಪಡೆಯುವುದು :

ಸದರಿ ಯೋಜನಾ ಪ್ರಾಧಿಕಾರದಲ್ಲಿ ರಸೀದಿ ದಾಸ್ತಾನು ವಹಿ ಹಾಗೂ ರಸೀದಿ ಪುಸ್ತಕಗಳನ್ನು ಪರಿಶೀಲಿಸಲಾಗಿ (ಉತ್ತಮತೆ ಶುಲ್ಕ, ಕೆರೆ ಸಂರಕ್ಷಣೆ ಶುಲ್ಕ ಮತ್ತು ಇನ್ನಿತರೆ ಶುಲ್ಕ) ಗಳನ್ನು ರಸೀದಿ ಮೂಲಕ ವಸೂಲಿ ಮಾಡುತ್ತಿದ್ದು ಈ ಶುಲ್ಕಗಳು ಮೌಲ್ಯವರ್ಧಿತವಾಗಿರುವುದರಿಂದ ರಸೀದಿ ಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಖರೀದಿಸಬೇಕಾಗಿರುತ್ತದೆ. ಆದರೆ ಸದರಿ ಯೋಜನಾ ಪ್ರಾಧಿಕಾರದಲ್ಲಿ ಖಾಸಗಿಯಾಗಿ ರಸೀದಿ ಪುಸ್ತಕಗಳನ್ನು ಖರೀದಿಸದಿರುವುದು ಕಂಡು ಬಂದಿರುತ್ತದೆ. ಈ ಕ್ರಮ ನಿಯಮ ಬಾಹಿರವಾಗಿದ್ದು ಇನ್ನು ಮುಂದೆ ಸರ್ಕಾರಿ ಮುದ್ರಣಾಲಯದಲ್ಲಿ ರಸೀದಿ ಪುಸ್ತಕಗಳನ್ನು ಖರೀದಿಸಲು ಕ್ರಮವಹಿಸಲು ಅಗತ್ಯವಾಗಿರುತ್ತದೆ.

17. ಸಕ್ರಮೀಕರಣ ಸಂಬಂಧ ನಿಗಧಿತ ನಮೂನೆ ವಿವರ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರ (ಅನಧಿಕೃತ ಅಭಿವೃದ್ಧಿ ಅಥವಾ ನಿರ್ಮಾಣಗಳನ್ನು ಸಕ್ರಮಗೊಳಿಸುವಿಕೆ) ನಿಯಮಗಳು 2007 ರ ನಿಗಧಿ ನಮೂನೆಗಳ ವ್ಯವಹಾರ 2016–17 ನೇ ಸಾಲಿನಲ್ಲಿ ಈ ಕೆಳಕಂಡಂತಿರುತ್ತದೆ.

ದಿ:01–04–2016 ಕ್ಕೆ ಪ್ರಾರಂಭಿಕ ಶಿಲ್ಕು	525
2016–17 ನೇ ಸಾಲಿನಲ್ಲಿ ಸ್ವೀಕೃತಿ	ಇಲ್ಲ
ಒಟ್ಟು	525
2016–17 ನೇ ಸಾಲಿನಲ್ಲಿ ಉಪಯೋಗಿಸಿದ್ದು	ಇಲ್ಲ
ದಿ:31–03–2017 ಕ್ಕೆ ಅಂತಿಮ ಶಿಲ್ಕು	525

18. ರಸೀದಿಗಳಿಂದ ವಸೂಲಿಸಿದ ಚೆಕ್ / ಡಿ.ಡಿ/ ಮೊತ್ತಗಳು ವಿಳಂಬವಾಗಿ ಜಮೆಯಾಗಿರುವ ವಿವರ:

2016–17 ನೇ ಸಾಲಿನಲ್ಲಿ ರಸೀದಿಗಳಿಂದ ವಸೂಲಿಸಿದ ಚೆಕ್ / ಡಿ.ಡಿ ಮೊತ್ತಗಳು ವಿಳಂಬವಾಗಿ ನಗದೀಕರಣವಾಗಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ರಸೀದಿ ಸಂಖ್ಯೆ	ದಿನಾಂಕ	ಮೊತ್ತ	ಜಮೆ ದಿನಾಂಕ	ಚೆಕ್/ ಡಿ.ಡಿ ಸಂಖ್ಯೆ
1.	7227	24–03–2017	158	03–04–2017	000034
2.	7228	23–03–2017	100	03–04–2017	878604
3.	7229	22–03–2017	420	12–04–2017	151664

19. ರಸೀದಿಯಿಂದ ಸ್ವೀಕರಿಸಿದ ಮೊತ್ತಗಳು:

ನೆಲಮಂಗಲ ಯೋಜನಾ ಪ್ರಾಧಿಕಾರದಿಂದ 2016–17 ನೇ ಸಾಲಿಗೆ ವಿವಿಧ ಶುಲ್ಕಗಳನ್ನು ರಸೀದಿಗಳ ಮೂಲಕ ವಸೂಲಿಸಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ವಿವರ	ಮೊತ್ತಗಳು ರೂ.
1.	ಉತ್ತಮತೆ ಶುಲ್ಕ	1,56,50,195
2.	ನಿವೇಶನ ಶುಲ್ಕ	
3.	ಕಟ್ಟಡಗಳ ಶುಲ್ಕ	
4.	ಪರಿಶೀಲನಾ ಶುಲ್ಕ	2,20,450
5.	ಧೃಡೀಕೃತ ನಕ್ಷೆ / ದಾಖಲೆಗಳ ಶುಲ್ಕ	25,624
6.	ಉಸ್ತುವಾರಿ ಶುಲ್ಕ	69,000
7.	ಕೆರೆಗಳ ಸಂರಕ್ಷಣೆ ಶುಲ್ಕ	2,12,81,200
8.	ವಿಭಜನೆ ಶುಲ್ಕ	1,150
9.	ಭದ್ರತಾ ಠೇವಣಿ ಶುಲ್ಕ	53,79,550
10.	ಆರ್.ಟಿ.ಐ ಶುಲ್ಕ	14,488
11.	ಇತರೆ ಶುಲ್ಕ	300
12.	M.P(P) Map, CD,Z.R & A3 size colour map book ಮಾರಾಟ	1,200
13.	ದಂಡ	17,97,500
	ಒಟ್ಟು ರೂ	**4,44,40,657**

20. ಉತ್ತಮತೆ ಶುಲ್ಕವನ್ನು ಯೋಜನಾ ಮಂಡಳಿಗೆ ಪಾವತಿಸಿರುವ ವಿವರ :

ಯೋಜನಾ ಪ್ರಾಧಿಕಾರವು ಪ್ರತಿ ವರ್ಷ ವಸೂಲಿಸುವ ಉತ್ತಮತೆ ಶುಲ್ಕದ ಶೇ.5 ರಷ್ಟು ಮೊತ್ತವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷೆನ್ 18 ರನ್ವಯ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ ಬೆಂಗಳೂರು ರವರಿಗೆ ವಂತಿಕೆ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ. ಅದರಂತೆ 2015–16 ನೇ ಸಾಲಿನಲ್ಲಿ ಒಟ್ಟಾರೆ ರೂ. 2,51,05,140–00 ಗಳ ಉತ್ತಮತೆ ಶುಲ್ಕ ವಸೂಲಿಸಲಾಗಿದ್ದು, ಶೇ.5 ರ ಬಾಬ್ತು ರೂ.12,55,257–00 ಗಳನ್ನು ರಾಜ್ಯ ಯೋಜನಾ ಮಂಡಳಿಗೆ ಚೆಕ್ ಸಂಖ್ಯೆ– 095778 ದಿನಾಂಕ:19–08–2016 ರಂದು ಪಾವತಿಸಲಾಗಿದೆ.

2016–17 ನೇ ಸಾಲಿನಲ್ಲಿ ಒಟ್ಟಾರೆ ರೂ.1,56,50,195–00 ಗಳ ಉತ್ತಮತೆ ಶುಲ್ಕ ವಸೂಲಿಸಲಾಗಿದ್ದು, ಶೇ.5 ರ ಬಾಬ್ತು ರೂ.7,82,510–00 ಗಳನ್ನು ಅಧ್ಯತೆ ಮೇಲೆ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಪಾವತಿಸಲು ಕ್ರಮವಹಿಸಲು ಸೂಚಿಸಲಾಗಿದೆ.

(ರೂ.ಗಳಲ್ಲಿ)

ದಿ:01–04–2016 ಕ್ಕೆ ಪ್ರಾರಂಭ ಬಾಕಿ	1255257
2016–17 ನೇ ಸಾಲಿನಲ್ಲಿ ಪಾವತಿ ಮಾಡಬೇಕಾದ ಮೊತ್ತ	782510
ಒಟ್ಟು ರೂ.	**2037767**
2016–17 ನೇ ಸಾಲಿನಲ್ಲಿ ಪಾವತಿ (2015–16 ರ ಬಾಬ್ತು)	1255257
ದಿ:31–03–2017 ಕ್ಕೆ ಅಂತಿಮ ಶಿಲ್ಕು (ಬಾಕಿ)	782510

21. ಭದ್ರತಾ ಠೇವಣಿ ವಿವರ :

ನೆಲಮಂಗಲ ಯೋಜನಾ ಪ್ರಾಧಿಕಾರದಿಂದ 2016–17 ನೇ ಸಾಲಿನಲ್ಲಿ ಹಾಜರುಪಡಿಸಲಾದ ಕಡತಗಳು ಹಾಗೂ ಜಮಾ ಖರ್ಚು ಪಟ್ಟಿಯಂತೆ ವಲಯ ನಿಯಮಾವಳಿಗಳಂತೆ ಗುಂಪು ಮನೆ 5 ಮಹಡಿಗಳಿಗಿಂತ ಹೆಚ್ಚಿದ ವಾಸದ ಗುಂಪು ಮನೆಗೆ ಹಾಗೂ ವಾಣಿಜ್ಯ ಉದ್ದೇಶದ ಕಟ್ಟಡಗಳಿಗೆ 300 ಚ.ಮೀಗೆ ಹೆಚ್ಚಿದ ಕಟ್ಟಡಗಳಿಗೆ ನಿರ್ಮಾಣಕ್ಕೆ ಅನುಮೋದನೆಗಾಗಿ ಚ.ಮೀ ಗೆ ರೂ.50 ರಂತೆ ಭದ್ರತಾ ಠೇವಣಿ ರೂಪದಲ್ಲಿ ಒಟ್ಟಾರೆ ರೂ.5379550–00 ಗಳನ್ನು ವಸೂಲಿಸಿರುವುದು ಕಂಡು ಬಂದಿದ್ದು, ವರ್ಷಾಂತ್ಯಕ್ಕೆ ಬಾಕಿ 53 ಪ್ರಕರಣಗಳಿದ್ದು, ಒಟ್ಟು ರೂ.24608304–00 ಗಳು ಇದ್ದು, ಸದರಿ ಠೇವಣಿಗಳು ಬಾಕಿ ಇರುತ್ತದೆ.

3 ವರ್ಷ ಮೇಲ್ಪಟ್ಟಿರುವ ಠೇವಣಿಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ 278 ರಂತೆ ಸಂಸ್ಥೆ ನಿಧಿಗೆ ಮುಟ್ಟುಗೋಲು ಹಾಕಿಕೊಳ್ಳುವುದು ನಂತರದ ಅವಧಿಯಲ್ಲಿ ಹಿಂಪಾವತಿಗೆ ಕೋರಿಕೆ ಬಂದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಪಾವತಿಸಬಹುದಾಗಿರುತ್ತದೆ.

(ರೂ.ಗಳಲ್ಲಿ)

ದಿ:01–04–2016 ಕ್ಕೆ ಪ್ರಾರಂಭ ಉಳಿಕೆ	19228754
2016–17 ನೇ ಸಾಲಿಗೆ ಸ್ವೀಕೃತಿಗಳು	5379550
ಒಟ್ಟು ರೂ.	24608304
2016–17 ನೇ ಸಾಲಿಗೆ ಪಾವತಿ	ಇಲ್ಲ
ದಿ:31–03–2017 ಕ್ಕೆ ಅಂತಿಮ ಶಿಲ್ಕು	24608304

ಮೇಲ್ಕಂಡ ವಿವರದಂತೆ ವಹಿಯಲ್ಲಿ ಘೋಷ್ವಾರೆ ಹಾಕಿ ಧೃಢೀಕರಿಸಿಕೊಳ್ಳಲು ಸೂಚಿಸಿದೆ.

22. ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕರಿಸಿದ ಶುಲ್ಕವನ್ನು ತಡವಾಗಿ ಸಂದಾಯ ಮಾಡಿರುವುದು:

2016–17 ನೇ ಸಾಲಿನಲ್ಲಿ ಮಂಡಳಿಯ ಮಾಹಿತಿ ಹಕ್ಕು ಕಾಯಿದೆ ಅಡಿ ವಾರ್ಷಿಕವಾಗಿ ರೂ.2300–00 ಗಳನ್ನು ಅರ್ಜಿ ಶುಲ್ಕವಾಗಿ ಸ್ವೀಕರಿಸಿದ್ದು, ಸದರಿ ಮೊತ್ತವನ್ನು ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಪ್ರತಿ ಮಾಹೆಯಾನ ಜಮೆ ಮಾಡಿದ್ದು, ಸದರಿ ಶುಲ್ಕದ ಮೊತ್ತವನ್ನು ವಾರ್ಷಿಕವಾಗಿ ದಿನಾಂಕ:26–05–2017 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಲಮಂಗಲ ಶಾಖೆಗೆ ಜಮೆ ಮಾಡಲಾಗಿರುತ್ತದೆ. ಆದರೆ ಮಾಹೆಯವಾರು ಸ್ವೀಕರಿಸಲಾದ ಮೊತ್ತವನ್ನು ಒಟ್ಟಾರೆಯಾಗಿ ಆರ್ಥಿಕ ವರ್ಷ ಮುಗಿದ ನಂತರ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ತಡವಾಗಿ ಜಮೆ ಮಾಡಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ಈ ರೀತಿ ತಡವಾಗಿ ಜಮೆ ಮಾಡಿರುವುದು ನಿಯಮ ಬಾಹಿರವಾಗಿದ್ದು, ಇನ್ನು ಮುಂದೆ ಶುಲ್ಕ ಸ್ವೀಕರಿಸಿದ ಮಾಹೆಯಲ್ಲಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಕ್ರಮವಹಿಸುವುದು ಅಗತ್ಯವಾಗಿರುತ್ತದೆ.

23. ಸ್ವಂತಕ್ಕೆ ಚೆಕ್ ಮಾಡಿ ಡ್ರಾ ಮಾಡಿ ಪಾವತಿಸಿರುವುದು:

ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಸದರಿ ಸಾಲಿನಲ್ಲಿ ಸ್ವಂತಕ್ಕೆ (Self) ಚೆಕ್‌ಗಳ ಮೂಲಕ ಡ್ರಾ ಮಾಡಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಈ ರೀತಿ ಡ್ರಾ ಮಾಡಿರುವುದಕ್ಕೆ ನಿಯಮದಲ್ಲಿ ಅವಕಾಶ ಇರುತ್ತದೆಯೇ ಇದ್ದಲ್ಲಿ ಹಾಜರುಪಡಿರುವಂತೆ ವಿಚಾರಣೆ ಪತ್ರ ಸಂಖ್ಯೆ.3/2016–17 ದಿನಾಂಕ:25–05–2017 ರಂದು ಜಾರಿ ಮಾಡಿ ವಿವರಣೆ ನೀಡಲು ಕೋರಲಾಗಿದ್ದು, ಇದ್ದಕ್ಕುತ್ತರವಾಗಿ ಸದರಿ ಪ್ರಾಧಿಕಾರದವರು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು / ನೌಕರರ ಪ್ರತಿ ಮಾಹೆಯ ವೇತನದಲ್ಲಿ ಕಡಿತಗೊಳಿಸಲಾಗುವ ಸಾಮಾನ್ಯ ಭವಿಷ್ಯ ನಿಧಿ, ಜಿಪಿಎಫ್ ವಂತಿಕೆಗಳನ್ನು ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ ಚಲನ್ ಮೂಲಕ ಸಂಬಂಧಪಟ್ಟ ಲೆಕ್ಕ ಶೀರ್ಷಕಿಗೆ ಜಮಾ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ.ಆಇ:01:ಟಿಸಿಇ:2012 ದಿನಾಂಕ:21–06–2012 ರಲ್ಲಿ ಕಛೇರಿಗಳಲ್ಲಿ ಅಗತ್ಯವಿರುವ ಸರಕು ಸಾಮಾಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವ ಸಲುವಾಗಿ ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮಗಳ ನಿಯಮ 55 (49) (ಎ) ರಲ್ಲಿನ ರೂ.500–00 ಗಳ ಮಿತಿಯನ್ನು ರೂ.5000–00 ಗಳಿಗೆ ಹೆಚ್ಚಿಸಿ ಆದೇಶಿಸಿರುವಂತೆ ಪ್ರಾಧಿಕಾರದಲ್ಲಿ ಪ್ರಸ್ತುತ ರೂ.5,000–00 ಗಳನ್ನು ಖಾಯಂ ಮುಖಂಡವಾಗಿ ಕಛೇರಿ ಕೈ ಹಣವನ್ನು ನಿಗಧಿಪಡಿಸಲಾಗಿದ್ದು, ಅವಶ್ಯಕತೆ ಅನುಗುಣವಾಗಿ ಸಾಮಾಗ್ರಿ ಖರೀದಿ / ನಕ್ಷೆಗಳ ಜೆರಾಕ್ಸ್ / ಮಾಸ್ಟರ್ ಪ್ಲಾನ್ ಪ್ರಿಂಟ್ ಹಾಗೂ

ಇನ್ನಿತರೆ ಕಾರ್ಯಗಳಿಗೆ ಸದರಿ ಕೈ ಹಣವನ್ನು ಸ್ವಂತಕ್ಕೆ ಚೆಕ್‌ಮೂಲಕ ಡ್ರಾ ಮಾಡಿರುವುದೆಂದು ತಿಳಿಸಿರುತ್ತಾರೆ. ಆದರೆ ಪ್ರಾಧಿಕಾರದವರು ನೀಡಿರುವ ಉತ್ತರವು ಸಮಂಜಸವಾಗಿಲ್ಲದಿ ರುವುದರಿಂದ ಇನ್ನು ಮುಂದೆ ನಿಯಮ ಬಾಹಿರವಾಗಿ ಸ್ವಂತಕ್ಕೆ ಚೆಕ್‌ಗಳನ್ನು ಡ್ರಾ ಮಾಡದಂತೆ ಸಕ್ಷಮ ಪ್ರಾಧಿಕಾರ ಸೂಕ್ತ ನಿರ್ದೇಶನ ನೀಡುವುದು ಆಗತ್ಯವಾಗಿರುತ್ತದೆ. ವಿವರ ಅನುಬಂಧ–4 ರಲ್ಲಿ ವರದಿಗೆ ಲಗತ್ತಿಸಿದೆ.

24. M.P(P) Map, CD, Z.R & A3 size colour map book ಮಾರಾಟ ದಾಸ್ತಾನು ವಹಿ ನಿರ್ವಹಿಸದಿರುವುದು :

2016–17 ನೇ ಸಾಲಿನಲ್ಲಿ ಅನುಮೋದಿತ M.P (P) Map, CD, Z.R & A3 size colour map book ಗಳನ್ನು ಮಾರಾಟ ಮಾಡಿ ಇದರಿಂದ ರೂ.1,200–00 ಗಳು ವಿವಿಧ ಅರ್ಜಿದಾರರಿಂದ ಸ್ವೀಕರಿಸಿ ಮಂಡಳಿ ಬ್ಯಾಂಕ್ ಖಾತೆಗೆ ಜಮೆ ಮಾಡಿರುವುದು 2016–17 ನೇ ಸಾಲಿನ ಆದಾಯ ಮತ್ತು ವೆಚ್ಚ ಪಟ್ಟಿಯಿಂದ ಕಂಡು ಬಂದಿರುತ್ತದೆ. ಆದರೆ ಸದರಿ ದಾಖಲೆಯ ನಕ್ಷೆಗಳನ್ನು ಪ್ರಸಕ್ತ ಸಾಲಿನಲ್ಲಿ ಎಷ್ಟು ತಯಾರಿಸಿದ್ದು ಹಾಗೂ ಎಷ್ಟು ಮಾರಾಟ ಮಾಡಿದ್ದು ಹಾಗೂ ಆರ್ಥಿಕ ವರ್ಷದ ಅಂತ್ಯಕ್ಕೆ ಎಷ್ಟು ಬಾಕಿ ಉಳಿದಿರುತ್ತವೆ ಎಂಬ ಬಗ್ಗೆ ಸಮರ್ಪಕವಾಗಿ ದಾಸ್ತಾನು ವಹಿ ನಿರ್ವಹಿಸಿರುವುದಿಲ್ಲ. ಹಾಜರುಪಡಿಸಲಾಗಿರುವ ದಾಸ್ತಾನು ವಹಿಯಂತೆ ವಿವರಗಳು ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ವಿವರ	ಪ್ರಾರಂಭಿಕ ಶಿಲ್ಕು	ಖರೀದಿ ಸಂಖ್ಯೆ	ಮಾರಾಟ ಮಾಡಲಾದ ಸಂಖ್ಯೆ	ಉಳಿಕೆ ವಿವರ
1.	M.P(P) Map	0	2	2	–
2.	CD	91	0	2	89
3.	Z.R	48	0	0	48
4.	A3 size colour map book	–	–	–	–

25. ಪ್ರಾಧಿಕಾರದ ಸ್ವಂತ ಕಟ್ಟಡದ ನಿರ್ಮಾಣಕ್ಕೆ ಹಣ ನೀಡಿರುವ ವಿವರ:

ನೆಲಮಂಗಲ ಯೋಜನಾ ಪ್ರಾಧಿಕಾರ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ ನೆಲಮಂಗಲದ ಸರ್ವೆ.ನಂ.213 ರಲ್ಲಿ 10ಎಕರೆ–23 ಗುಂಟೆಯಲ್ಲಿ 2142.28 ಚ.ಮೀ ವಿಸ್ತೀರ್ಣದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿ ಈ ಬಗ್ಗೆ ಲೋಕೋಪಯೋಗಿ ಇಲಾಖೆಯು ರೂ.12500000–00 ಗಳ ಮೊತ್ತದ ಅಂದಾಜು ಪಟ್ಟಿ ಮತ್ತು ನಕ್ಷೆ ವಿನ್ಯಾಸಕ್ಕೆ ತಾಂತ್ರಿಕ ಮಂಜೂರಾತಿ ನೀಡಿರುವ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ/333/ಬಿಎಂಆರ್/2010 ಬೆಂಗಳೂರು ದಿನಾಂಕ:03–12–2010 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಈ ಸಂಬಂಧ ಪ್ರಾಧಿಕಾರವು ಕಛೇರಿ ಕಟ್ಟಡ ನಿರ್ಮಾಣ ಮಾಡಲು ಕಾರ್ಯ ಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ವಿಭಾಗದವರಿಗೆ ಚೆಕ್. ಸಂ:277836 ದಿ:04–03–2011 ರಲ್ಲಿ ರೂ.12500000–00 ಚೆಕ್ ಸಂಖ್ಯೆ.799378 ದಿನಾಂಕ:15–07–2015 ರಲ್ಲಿ 4,80,000–00 ಹಾಗೂ ಚೆಕ್ ಸಂಖ್ಯೆ.799419 ದಿನಾಂಕ:18–09–2015 ರ ಮೂಲಕ ರೂ.4,70,000–00 ಒಟ್ಟು ರೂ. 13450000–00 ಗಳು ಒಟ್ಟಾರೆ ಕಟ್ಟಡ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಗೆ ಪಾವತಿಸಲಾಗಿದ್ದು ಅವರಿಂದ ಈ ಮೊತ್ತಕ್ಕೆ ಹಣ ಬಳಕೆ ಪ್ರಮಾಣ ಪಡೆದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಹಿಂದಿನ ಲೆಕ್ಕ ಪರಿಶೋಧನೆಯಲ್ಲಿ ಪಾವತಿಸಲಾಗಿದ್ದರೂ ಪ್ರಸ್ತುತ ಲೆಕ್ಕ ಪರಿಶೋಧನೆಯಲ್ಲಿ ಹಾಜರುಪಡಿಸಿರುವುದಿಲ್ಲ, ಸದಸ್ಯ ಕಾರ್ಯದರ್ಶಿಗಳು ಇದರ ಬಗ್ಗೆ ಗಮನಹರಿಸಿ ಲೋಕೋಪಯೋಗಿ ಇಲಾಖೆಯಿಂದ ಹಣ ಬಳಕೆ ಪ್ರಮಾಣ ಪತ್ರ ಪಡೆದು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

26. ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಸಿ.ಎ.ನಿವೇಶನ ಮತ್ತು ಪಾರ್ಕ್‌ಗಳ ವಿವರ ಹಾಜರುಪಡಿಸುವುದು :

2016–17 ನೇ ಸಾಲಿನಲ್ಲಿ ಯೋಜನಾ ಪ್ರಾಧಿಕಾರದ ವತಿಯಿಂದ ಅನುಮೋದನೆಗೊಂಡಿರುವ ವಿವಿಧ ಬಡಾವಣೆಗಳ ವಿವರಗಳು ಹಾಗೂ ಅನುಮೋದಿತ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಜಾಗಗಳಾದ ರಸ್ತೆ / ಚರಂಡಿ/

ಪಾರ್ಕ್/ ಆಸ್ಪತ್ರೆ/ ಆಟದ ಮೈದಾನ ಹಾಗೂ ಸಿ.ಎ ನಿವೇಶನಗಳನ್ನು ಪ್ರಾಧಿಕಾರದ ಹೆಸರಿಗೆ ಉಪ ನೊಂದಣಾಧಿಕಾರಿಗಳ ಕಛೇರಿ ಯಿಂದ ನೊಂದಾಣಿ ಮಾಡಿಸಿರುವ ವಿವರವನ್ನು ಒಳಗೊಂಡಂತೆ ಧೃಢೀಕೃತ ವಹಿಯನ್ನು ಹಾಜರುಪಡಿಸುವಂತೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ.06/2017 ದಿನಾಂಕ:25–05–2017 ರಂದು ಜಾರಿ ಮಾಡಿ ಕೋರಲಾಗಿದ್ದರೂ ಸಹ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸಿ.ಎ ನಿವೇಶನಗಳ ಸಂಖ್ಯೆ ಮತ್ತು ಅವುಗಳ ವಿಸ್ತೀರ್ಣ ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಾಗಿರುವುದಿಲ್ಲ. ವಾರ್ಷಿಕವಾಗಿ ಭೌತಿಕ ಪರಿಶೀಲನೆ ಮಾಡಿ ಧೃಢೀಕರಿಸಲು ಸೂಚಿಸಿದ್ದು, ಇಲ್ಲವಾದಲ್ಲಿ ಪ್ರಾಧಿಕಾರದ ಸ್ವತ್ತು ಪರಭಾರೆ / ಒತ್ತುವರಿಯಾಗುವ ಸಂಭವಗಳಿದ್ದು, ಈ ಬಗ್ಗೆ ಕೂಡಲೇ ಅಗತ್ಯ ಕ್ರಮ ವಹಿಸುವುದು.

27. ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಠ 5 ವರ್ಷ ಮುಗಿದಿದ್ದರೂ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರ:

2016–17 ನೇ ಸಾಲಿನಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಠ 5 ವರ್ಷ ಮುಗಿದಿದ್ದರೂ ಸಹ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ.5/2017 ದಿನಾಂಕ:24–05–2017 ರಂದು ನೀಡಿದ್ದು, ಇದಕ್ಕೆ ಸಂಬಂಧಿಸಿದಂತೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನೀಡಿರುವ ವಿನ್ಯಾಸಗಳ ಪೈಕಿ 5 ವರ್ಷ ಪೂರ್ಣಗೊಂಡಿದ್ದರೂ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿಸಿಕೊಳ್ಳದೇ ಇರುವ ವಿನ್ಯಾಸ ಮಾಲೀಕರುಗಳಿಗೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಂಪೂರ್ಣವಾಗಿ ನಿವೇಶನಗಳನ್ನು ಬಿಡುಗಡೆ ಮಾಡಿಕೊಳ್ಳಲು ಸೂಚಿಸಿ ಪತ್ರ ವ್ಯವಹಾರಿಸಲಾಗಿರುತ್ತದೆ ಎಂದು ಜಂಟಿ ನಿರ್ದೇಶಕರು, ಸಹಾಯಕ ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರದವರು ಉತ್ತರಿಸಿರುತ್ತಾರೆ. 5 ವರ್ಷ ಪೂರ್ಣಗೊಂಡಿರುವ ವಿನ್ಯಾಸಗಳ ವಿವರ ಪಟ್ಟಿಯನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ. ಸರ್ಕಾರದ ಸುತ್ತೋಲೆ ಸಂ:ನಅಇ/599/ಮೈಅಪ್ರ/2012 ದಿನಾಂಕ:03–12–2012 ರಂತೆ ಗರಿಷ್ಠ 5 ವರ್ಷದೊಳಗೆ ಅನುಮೋದಿಸಿರುವ ಬಡಾವಣೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಆದೇಶವಿರುತ್ತದೆ. ಈ ಬಗ್ಗೆ ಕ್ರಮ ವಹಿಸಿ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಿರುವುದು ಅವಶ್ಯವಿರುತ್ತದೆ.

28. ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿರುವ ವಿವರ:

ಕರ್ನಾಟಕ ಸರ್ಕಾರದ ಸುತ್ತೋಲೆ ಸಂ:ನಅಇ:112/ಬೆಂರೂಪ್ರಾ/2005 ದಿನಾಂಕ:26–05–2005 ರಂತೆ ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.60 ರಷ್ಟು ನಿವೇಶಗಳನ್ನು ನೊಂದಣಿ ಮಾಡುವ ಬಗ್ಗೆ ಉಪನೊಂದಣಾಧಿಕಾರಿಗಳಿಗೆ ಪತ್ರ ಮುಖೇನ ಬಿಡುಗಡೆಗೊಳಿಸಿರುವ ಸಂಬಂಧ ಹಿಂದಿನ ಸಾಲಿನ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ ಷರತ್ತಿನ ಕ್ರ.ಸಂ:1 ರಂತೆ ಎರಡನೇ ಹಂತದಲ್ಲಿ ಒಟ್ಟಾರೆ ವಿನ್ಯಾಸದಲ್ಲಿನ ಉಳಿಕೆ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆಗೆ ಮಾಡುವ ಮುನ್ನ ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಡಾಂಬರ್ ರಸ್ತೆ, ಮಳೆ ನೀರಿನ ಚರಂಡಿ, ಕೊಳಚೆ ನೀರಿನ ಸಂಗ್ರಹಣಾ ಘಟಕ, ಕುಡಿಯುವ ನೀರಿನ ಸರಬರಾಜು (ಓಹೆಚ್‌ಟಿ) ವಿದ್ಯುಚ್ಛಕ್ತಿ ಸಂಪರ್ಕ ಹಾಗೂ ರಸ್ತೆ ಬದಿ ಸಾಲು ಮರಗಳ ನೆಡುವಿಕೆ ಕಾರ್ಯವನ್ನು ಎರಡು ವರ್ಷದೊಳಗೆ ಸಂಪೂರ್ಣಗೊಳಿಸಿರುವ ಬಗ್ಗೆ ಹಾಗೂ ಷರತ್ತಿನಂತೆ ಎರಡು ವರ್ಷಗಳ ಅವಧಿಯಲ್ಲಿ ನಾಗರೀಕ ಸೌಲಭ್ಯಗಳ ಕಾರ್ಯವನ್ನು ನಿರ್ವಹಿಸಿರುವ ವಸತಿ ವಿನ್ಯಾಸಗಳ ಎರಡು ವರ್ಷಗಳ ಕಾಲಮಿತಿಯೊಳಗೆ ನಿರ್ವಹಿಸದೇ ನವೀಕರಣವನ್ನು ಪಡೆದ ಮಾಲೀಕರ ವಿವರ ನವೀಕರಣವನ್ನು ಪಡೆಯದೇ ಬಡಾವಣೆ ಅಭಿವೃದ್ಧಿಯನ್ನು ಪಡಿಸದೇ ಇರುವ ಮಾಲೀಕರ ವಿವರ ಹಾಗೂ ಪ್ರಾಧಿಕಾರವು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರ ಕೋರಿ ವಿಚಾರಣಾ ಪತ್ರ ಸಂಖ್ಯೆ:07/2017 ದಿನಾಂಕ:24–05–2017 ರಂದು ಕೋರಲಾಗಿತ್ತು.

ಉತ್ತರವಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ.ನಅಇ:112:ಬೆಂ.ರೂ.ಪ್ರಾ:2005 ದಿನಾಂಕ:26–05–2005 ರಂತೆ ಪ್ರಾಧಿಕಾರ ದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿನ 2ನೇ ಹಂತ ಶೇಕಡಾ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ 2 ವರ್ಷಗಳ ಕಾಲಮಿತಿಯೊಳಗೆ ವಿನ್ಯಾಸ ಮಾಲೀಕರು ಅಭಿವೃದ್ಧಿಪಡಿಸಲಾಗದೆ ಹೆಚ್ಚಿನ ಕಾಲಕಾಶವನ್ನು ಕೋರಿದ್ದು, ಪ್ರಾಧಿಕಾರದಿಂದ ಸದರಿ ವಿನ್ಯಾಸ ಮಾಲೀಕರುಗಳಿಗೆ ವಿನ್ಯಾಸ ಅಭಿವೃದ್ಧಿಪಡಿಸಿ ಉಳಿದ ಶೇಕಡಾ 40% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಸಂಬಂಧ ಹೆಚ್ಚಿನ ಕಾಲಕಾಶವನ್ನು ನೀಡಲಾಗಿರುತ್ತದೆ. ಎಂದು ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ

ಯೋಜನಾ ಪ್ರಾಧಿಕಾರವರು ಉತ್ತರಿಸಿರುತ್ತಾರೆ, ನವೀಕರಣ ಪಡೆಯದೇ / ಅಭಿವೃದ್ಧಿಪಡಿಸದೇ ಇರುವ ವಿನ್ಯಾಸ ಮಾಲೀಕರ ವಿವರಗಳನ್ನು ಅನುಬಂಧ –5 ರಲ್ಲಿ ಲಗತ್ತಿಸಿದೆ.

ಮುಂದುವರೆದು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ.ಬಿಎಂಆರ್‌ಡಿಎ/ಎಡಿಟಿಪಿ–2/ ಇತರೆ/24/2012–13 ದಿನಾಂಕ:31–10–2014 ರಂತೆ ದಂಡ ವಸೂಲಿಸಿ ನಿವೇಶನ ಬಿಡುಗಡೆ ಕ್ರಮವಹಿಸುವುದು ಅವಶ್ಯಕ ವಾಗಿರುತ್ತದೆ.

29. ಬಡಾವಣೆ ನಕ್ಷೆ ಅನುಮೋದನೆ ನೀಡುವಾಗ ನಿಯಮ ಉಲ್ಲಂಘಿಸಿ ಕಡಿಮೆ ಉತ್ತಮತೆ ಶುಲ್ಕ ವಸೂಲಿಯಿಂದ ಸಂಸ್ಥೆಗೆ 1754.47 ಕೋಟಿ. ರೂ. ಗಳು ನಷ್ಟವಾಗಿರುವುದು:

ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪರಿವರ್ತಿತ ಭೂಮಿಯಲ್ಲಿ ಅಭಿವೃದ್ಧಿದಾರರಿಂದ ಬಡಾವಣೆ ಅಭಿವೃದ್ಧಿಗೊಳಿಸಲು ತಗಲುವ ವಾಸ್ತವಿಕ ವೆಚ್ಚದ ವಿವರಗಳನ್ನು ಪಡೆಯದೆ ಬಡಾವಣೆ ನಕ್ಷೆ ಅನುಮೋದನೆ ನೀಡಲಾಗುತ್ತಿದೆ. ಇದರಿಂದ ಭೂಮಿಯ ಮೌಲ್ಯ ಮತ್ತು ಅಭಿವೃದ್ಧಿಗೆ ತಗಲುವ ವೆಚ್ಚವನ್ನು ಪರಿಗಣಿಸಿ ಆಯಾ ಸಾಲಿನ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಆಧರಿಸಿ ನಿವೇಶನಗಳ ಮೌಲ್ಯ ನಿರ್ಧರಣೆ ಲೆಕ್ಕಚಾರ ಮಾಡಿದಾಗ ಅನುಮೋದಿತ ಬಡಾವಣೆ ಮೌಲ್ಯ ನಿರ್ಧರಣೆ ಆಗಿ ಭೂಮಿ ಮೌಲ್ಯ ಮತ್ತು ಭೂ ಅಭಿವೃದ್ಧಿ ವೆಚ್ಚ ಕಳೆದು ಉಳಿದ ಮೊತ್ತವು ಭೂಮಿಯ ಉತ್ತಮತೆ ಮೌಲ್ಯ ಆಗಿರುತ್ತದೆ. (appreciation of market value of land).

ಭೂ ಅಭಿವೃದ್ಧಿಗೆ ಅನುಮೋದನೆ ನೀಡುವ ಪೂರ್ವದಲ್ಲಿ ಭೂ ಪರಿವರ್ತನೆ ಭೂಮಿಯ ಅಭಿವೃದ್ಧಿಯಿಂದ ಹೆಚ್ಚಿನ ಆದಾಯವು ಅಭಿವೃದ್ಧಿದಾರನಿಗೆ ಬರುತ್ತದೆ. ಹಾಗೂ ಭೂಮಿಯ ಅಂದಾಜು ಮೌಲ್ಯ ಹೆಚ್ಚಳವಾಗುವುದರಿಂದ ಪ್ರಾಧಿಕಾರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 18 ರ ರೀತ್ಯಾ ಈ ಮೌಲ್ಯಯುತ ಭೂಮಿಯ ಅಂದಾಜು ಮೌಲ್ಯ 1/3 ರಷ್ಟು ಭಾಗಕ್ಕೆ ಮೀರದಂತೆ ಉತ್ತಮತೆ ಶುಲ್ಕವನ್ನು ವಿಧಿಸಬೇಕಾಗಿದೆ.

ಸದರಿ ಮಾನದಂಡವನ್ನು ವಸತಿ ಮತ್ತು ಇತರೆ ಕಟ್ಟಡಗಳಿಗೆ ಅಳವಡಿಸಿಕೊಂಡು ಉತ್ತಮತೆ ಶುಲ್ಕವನ್ನು ಲೆಕ್ಕಚಾರ ಮಾಡಿ ವಸೂಲಿಸಿದ ಮೊತ್ತವನ್ನು ಪ್ರಾಧಿಕಾರದ ನಿಧಿಗೆ ಜಮೆ ಮಾಡಬೇಕು.

ಪ್ರಾಧಿಕಾರದಲ್ಲಿ ದಿನಾಂಕ:27–11–1997 ರಲ್ಲಿನ ಸುತ್ತೋಲೆಯಲ್ಲಿನ ದರಗಳನ್ನು ಇದುವರೆವಿಗೂ ವಿಧಿಸುತ್ತಾ ಬಂದಿದ್ದು, ಕಾಯ್ದೆಯ ನಿಯಮಾವಳಿಯನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ. ಈ ಕಾರಣದಿಂದಾಗಿ ಪ್ರಾಧಿಕಾರಕ್ಕೆ ಕೋಟ್ಯಂತರ ರೂಗಳು ನಷ್ಟವಾಗಿರುತ್ತದೆ. 19 ವರ್ಷಗಳಿಂದ ಇದೇ ದರಗಳನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಭೂಮಿಯ ಮೌಲ್ಯ ವರ್ದನೆ ಗನುಗುಣವಾಗಿ ಆಯಾ ಆಯಾ ವರ್ಷದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಅನುಸರಿಸಿ ಶುಲ್ಕ ದರಗಳನ್ನು ಪರಿಷ್ಕರಿಸಿಕೊಂಡಿಲ್ಲ. ಪರಿಷ್ಕರಣೆಗೆ ಸರ್ಕಾರದ ಅನುಮೋದನೆ ಪಡೆಯುವಲ್ಲಿಯೂ ಯಾವುದೇ ಕ್ರಮವಹಿಸಿರುವುದಿಲ್ಲ. ಇದು ಸಂಸ್ಥೆಯಿಂದ ಆದ ಗುರುತರ ಲೋಪವಾಗಿರುತ್ತದೆ. ಇಂತಹ ಪ್ರಾಧಿಕಾರದ ನಡೆಯಿಂದ ಸಂಸ್ಥೆಗೆ ಆಗಿರುವ ನಷ್ಟದ ವಿವರಗಳನ್ನು ಅನುಬಂಧ–6 ರಲ್ಲಿ ಅಡಕಗೊಳಿಸಿದೆ.

ಆಯಾ ವರ್ಷದ ಅಂದಾಜು ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಅನುಸರಿಸಿ ಭೂಮಿ / ಕಟ್ಟಡಗಳ ಮೌಲ್ಯ ನಿರ್ಧರಣೆ ಲೆಕ್ಕಚಾರ ಮಾಡಿಕೊಂಡು ಉತ್ತಮತೆ ಶುಲ್ಕವನ್ನು ವಸೂಲಿಸಿಕೊಂಡು ಮಾಸ್ಟರ್ ಪ್ಲಾನ್ 2021 ರಲ್ಲಿ ನಿಗಧಿತ ಗುರಿಗಳನ್ನು ಸಾಧಿಸಲು ಕ್ರಮವಹಿಸಬೇಕಾಗಿತ್ತು. ಅದರೆ ಕಡಿಮೆ ಉತ್ತಮತೆ ಶುಲ್ಕದಿಂದ ಸಂಸ್ಥೆಗೆ ನಷ್ಟ ಉಂಟಾಗಿರುವುದಲ್ಲದೆ ಮಾಸ್ಟರ್ ಪ್ಲಾನ್ 2021 ಸಂಪೂರ್ಣ ಅನುಷ್ಠಾನಗೊಳ್ಳಲು ಸಕಾಲಿಕ ಕ್ರಮವಹಿಸಿಲ್ಲದಿರುವುದು ಕಂಡು ಬರುತ್ತದೆ.

ಆದ ಕಾರಣ ಈ ಸಂಬಂಧ ಸೂಕ್ತ ಕ್ರಮಕೈಗೊಳ್ಳುವವರೆಗೂ ರೂ.175447000–00 ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ.

30. ನಿವೇಶನದ ಉತ್ತಮತೆ ಶುಲ್ಕ ವಿದಿಸದೇ ಕೈ ಬಿಟ್ಟಿರುವುದು:

ನಗರ ಯೋಜನಾ ಪ್ರಾಧಿಕಾರದಿಂದ ನಿವೇಶನದ ಉತ್ತಮತೆ ಶುಲ್ಕ ವಿಧಿಸದೆ ಕೈಬಿಟ್ಟಿರುವುದು ಸದರಿ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಅರ್ಜಿದಾರರ ಹೆಸರು	ಕಡತ ಸಂಖ್ಯೆ	ನಿವೇಶನವಿರುವ ಬಡಾವಣೆಗೆ ವಿನ್ಯಾಸ ನಕ್ಷೆ ಅನುಮೋದನೆ ವಿವರ	ಗ್ರಾಮ ಮತ್ತು ಖಾತೆ ಸಂಖ್ಯೆ	ವಿಧಿಸಬೇಕಾಗಿರುವ ಶುಲ್ಕದ ಮೊತ್ತ
1.	ಶ್ರೀ.ಎಂ.ಸುಬ್ರಮಣ್ಯ	ನೆಯೋಪ್ರಾ:ಸಿಸಿ:07:2016–17	ನೆಯೋ:ಉನಿ.ಯೋ/ವಿ/ಬೆಂ.ಜಿ.ಅಗ್ರಾ ಮಾವವಿ 839/93–94 ದಿನಾಂಕ: 27–04–1994	ಅರಿಶಿನಕುಂಟೆ 584/95	2285–00
2.	ಶ್ರೀ.ಚನ್ನಗಂಗಯ್ಯ	ನೆಯೋಪ್ರಾ:ಸಿಸಿ:75:2016–17	ನೆಯೋ:ಉನಿ:ನೆಲಮಂಗಲ ರೂಪರೇಖೆ:406:1989–90 ದಿನಾಂಕ:07–08–1989	ವಿಶ್ವೇಶ್ವರಪುರ 162155	2700–00
				ಒಟ್ಟು	**4985–00**

ಈ ಮೇಲಿನಲ್ಲಿ ವಿವರಿಸಿದಂತೆ ಒಟ್ಟು ರೂ.4,985–00 ಗಳನ್ನು ಉತ್ತಮತೆ ಶುಲ್ಕ ವಿಧಿಸದೇ ಕೈ ಬಿಟ್ಟಿರುವ ಕುರಿತು ವಿಚಾರಣೆ ಪತ್ರ ಸಂಖ್ಯೆ.9/2017 ದಿನಾಂಕ:26–05–2017 ರಲ್ಲಿ ಜಾರಿ ಮಾಡಿ ಕಾರಣ ಕೇಳಲಾಗಿತ್ತು. ಇದ್ದಕ್ಕುತ್ತರವಾಗಿ ಪ್ರಾಧಿಕಾರದವರು ಕಣ್ಣ ತಪ್ಪಿನಿಂದಾಗಿ ಉತ್ತಮತೆ ಶುಲ್ಕ ವಿಧಿಸದೇ ಕೈಬಿಟ್ಟಿದ್ದು, ಸಂಬಂಧಿಸಿದ ಮಾಲೀಕರುಗಳಿಂದ ಡಿಡಿ. ಸಂಖ್ಯೆ.010211 ದಿನಾಂಕ:03–06–2017 ರಲ್ಲಿ ರೂ.2285–00 ಗಳನ್ನು ಮತ್ತು ದಿನಾಂಕ:09–06–2017 ರಲ್ಲಿ ರೂ.2700–00 ಗಳನ್ನು ಒಟ್ಟಾರೆಯಾಗಿ ರೂ.4985–00 ಗಳನ್ನು ಜಮಾ ಮಾಡಲಾಗಿದ್ದು ಜಮಾ ವಿವರಗಳನ್ನು ಪುನರ್ ಪರಿಶೀಲನಾ ವೇಳೆಯಲ್ಲಿ ಸದಸ್ಯ ಕಾರ್ಯದರ್ಶಿಗಳು ಹಾಜರು ಪಡಿಸಿದ್ದು ಪರಿಶೀಲಿಸಲಾಗಿರುತ್ತದೆ. ಇನ್ನು ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರವಹಿಸಲು ಸೂಚಿಸಿದೆ.

31. ವಸತಿ ಉದ್ದೇಶಕ್ಕಾಗಿ ಕಟ್ಟಡ ನಿರ್ವಹಿಸಲು ಪ್ರಾರಂಭಿಕ ಪತ್ರ ವಿತರಿಸುವಾಗ ಕಡಿಮೆ ಉತ್ತಮತೆ ಶುಲ್ಕ ವಿಧಿಸಿ ವಸೂಲಿಸಿರುವ ಕುರಿತು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ 1961 ಸೆಕ್ಷನ್ 18 (1) ರ ಪ್ರಕಾರ ವಸತಿ ಉದ್ದೇಶಕ್ಕಾಗಿ ಕಟ್ಟಡ ನಿರ್ಮಿಸಲು ಪ್ರಾರಂಭಿಕ ಪತ್ರ ನೀಡುವ ಸಂಬಂಧ ನಿಯಮ 37 ಎ (2) ರನ್ವಯ ಉತ್ತಮತೆ ಶುಲ್ಕವನ್ನು ವಿಧಿಸುವಾಗ ಕಡಿಮೆ ವಿಧಿಸಿ ವಸೂಲಿಸಲಾಗಿದ್ದು ವಿವರವನ್ನು ಅನುಬಂಧ–7 ರಲ್ಲಿ ಲಗತ್ತಿಸಿದೆ. ಒಟ್ಟು ರೂ.1277–00 ಕಡಿಮೆ ಉತ್ತಮತೆ ಶುಲ್ಕ ವಸೂಲಿಸಲಾಗಿದ್ದು, ಈ ಸಂಬಂಧ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ.8/2016–17 ದಿನಾಂಕ:26–05–2017 ರಲ್ಲಿ ಕಾರಣ ಕೇಳಿ ಜಾರಿಗೊಳಿಸಲಾಗಿತ್ತು, ವಸತಿ ಉದ್ದೇಶಕ್ಕಾಗಿ ಕಟ್ಟಡ ನಿರ್ಮಿಸಲು ಪ್ರಾರಂಭಿಕ ಪತ್ರ ನೀಡಿರುವ ಸಂಬಂಧ ಕಣ್ ತಪ್ಪಿನಿಂದಾಗಿ ಕಡಿಮೆ ಉತ್ತಮತೆ ಶುಲ್ಕವನ್ನು ಸ್ವೀಕರಿಸಲಾಗಿದ್ದು, ಸದರಿ ವ್ಯತ್ಯಾಸದ ಶುಲ್ಕವನ್ನು ಸಂಬಂಧಿಸಿದ ಮಾಲೀಕರಿಂದ ವಸೂಲಿಸಿ ಜಮೆ ಮಾಡಲಾಗಿದ್ದು ವಿವರವನ್ನು ಸದಸ್ಯ–ಕಾರ್ಯದರ್ಶಿಗಳು ಯೋಜನಾ ಪ್ರಾಧಿಕಾರ ನೆಲಮಂಗಲ ರವರು ಹಾಜರುಪಡಿಸಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಡಿ.ಡಿ.ಸಂಖ್ಯೆ	ದಿನಾಂಕ	ಮೊತ್ತ
1.	702761	03–06–2017	62
2.	702760	03–06–2017	260
3.	702759	03–06–2017	800
4.	702758	03–06–2017	30
5.	702757	03–06–2017	28
6.	883789	12–01–2017	100

ಮೇಲೆ ವಿವರಿಸಿದಂತೆ ಕಡಿಮೆ ವಿಧಿಸಲಾಗಿದ್ದ ಉತ್ತಮತೆ ಶುಲ್ಕವನ್ನು ಜಮಾ ಮಾಡಲಾಗಿದ್ದು ಪುನರ್ ಪರಿಶೀಲನೆ ದಿನಾಂಕದಂದು ಹಾಜರುಪಡಿಸಿದ್ದು ಪರಿಶೀಲಿಸಲಾಗಿರುತ್ತದೆ. ಇನ್ನು ಮುಂದೆ ಶುಲ್ಕವನ್ನು ವಿಧಿಸುವಾಗ ನಿಗದಿತ ದರ ಮತ್ತು ಮಾರ್ಗ ಸೂಚಿಗಳಂತೆ ವಸೂಲಿಸಲು ಸೂಚಿಸಿದೆ.

32. ದಿನವಹಿಯನ್ನು ನಿರ್ವಹಿಸದಿರುವುದು:

ಯೋಜನಾ ಪ್ರಾಧಿಕಾರದಲ್ಲಿ ವಿವಿಧ ಬಾಬ್ತುಗಳಿಂದ ಮೊತ್ತಗಳನ್ನು ವಸೂಲಿ ಮಾಡಿದ್ದು ರಸೀದಿಗಳನ್ನು ನೀಡಿರುತ್ತಾರೆ. ಸದರಿ ಮೊತ್ತಗಳನ್ನು ದಿನವಹಿಯಲ್ಲಿ ನಮೂದಿಸಿ ತದನಂತರ ಬ್ಯಾಂಕ್‌ಗೆ ಜಮಾ ಮಾಡಬೇಕಾಗಿರುತ್ತದೆ. ಆದರೆ ಸದರಿ ಯೋಜನಾ ಪ್ರಾಧಿಕಾರದಲ್ಲಿ ಈ ಕ್ರಮ ಅನುಸರಿಸದೆ ನೇರವಾಗಿ ನಗದು ಪುಸ್ತಕದಲ್ಲಿ ಜಮ ಮಾಡಿರುವುದು ಕಂಡು ಬಂದಿರುತ್ತದೆ, ಇನ್ನು ಮುಂದೆ ನಿಯಮ ರೀತಿಯ ದಿನವಹಿ ನಿರ್ವಹಿಸಿ ಮಾಸಾಂತ್ಯದಲ್ಲಿ ಘೋಷ್ವಾರೆ ಹಾಕಿ ಧೃಢೀಕರಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33. ಕಟ್ಟಡಗಳ ನಕ್ಷೆ ಮಂಜೂರಾತಿ ವಿವರ:

ಯೋಜನಾ ಪ್ರಾಧಿಕಾರದಿಂದ ಕಟ್ಟಡ ನಕ್ಷೆ ಮಂಜೂರಾತಿ ಕೋರಿ, ಬಂದ ಅರ್ಜಿಗಳ ಸಂಖ್ಯೆ ಮತ್ತು ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ ಹಾಗೂ ಹಿಂದಿನ ಸಾಲಿನಲ್ಲಿ ಮಂಜೂರಾತಿಗೆ ಬಂದ ಅರ್ಜಿಗಳಲ್ಲಿ ಎಷ್ಟು ? ಅರ್ಜಿಗಳಲ್ಲಿ ದಿನಾಂಕ:31–03–2017 ಕ್ಕೆ ವಿಲೇವಾರಿಯಾಗದೆ ಬಾಕಿ ಇರುವ ವಿವರಗಳನ್ನು ನೀಡುವಂತೆ ಕೋರಲಾಗಿತ್ತು.

ಸದರಿ ಸಾಲಿಗೆ ಪ್ರಾಧಿಕಾರವು ನೀಡಿರುವ ಧೃಢೀಕೃತ ಮಾಹಿತಿಯಂತೆ ಕಟ್ಟಡಗಳ ನಕ್ಷೆ ಮಂಜೂರಾತಿ ಹಾಗೂ ಹಿಂಬರಹ ಮತ್ತು ದಿನಾಂಕ:31–03–2017 ಕ್ಕೆ ಬಾಕಿ ಉಳಿದಿರುವ ವಿವರಗಳು ಈ ಕೆಳಕಂಡಂತೆ ನೀಡಲಾಗಿದೆ.

ದಿ: 01–04–2016 ಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಬಾಕಿ	139
2016–17 ನೇ ಸಾಲಿಗೆ ಸ್ವೀಕರಿಸಿದ ಅರ್ಜಿಗಳು	151
ಒಟ್ಟು	**290**
2016–17 ರಲ್ಲಿ ಮಂಜೂರಾತಿ / ವಿಲೇವಾರಿ ಮಾಡಿದ ಅರ್ಜಿಗಳ ವಿವರ	129
ದಿ: 31–03–2017 ಕ್ಕೆ ಬಾಕಿ ಉಳಿದ ಕಡತಗಳು	161

ಈ ಮೇಲಿನಲ್ಲಿ ವಿವರಿಸಿದಂತೆ ಮಾಹಿತಿಯನ್ನು ನೀಡಿದ್ದು, ಸದರಿ ವಿವರವನ್ನು ಧೃಢೀಕೃತ ವಹಿಯಲ್ಲಿ ವರ್ಷಾಂತ್ಯಕ್ಕೆ ಘೋಷ್ವಾರೆ ನಮೂದಿಸಿ ದೃಢೀಕರಿಸಲು ಸೂಚಿಸಿದೆ.

34. ಸಿಬ್ಬಂದಿ ವಿಭಾಗ:

ಸರ್ಕಾರದ ಆದೇಶ ಸಂ:ನಅಇ:57:ಬಿಎಂಆರ್:2010 ಬೆಂಗಳೂರು ದಿನಾಂಕ:06–10–2010 ರಂದು ಈ ಕೆಳಕಂಡ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿ ಸರ್ಕಾರದ ಮಂಜೂರಾತಿ ನೀಡಿದೆ.

ಕ್ರ.ಸಂ	ಹುದ್ದೆಯ ವಿವರ	ಸಂಖ್ಯೆ
1.	ಉಪ ನಿರ್ದೇಶಕರು	01
2.	ಸಹಾಯಕ ನಗರ ಯೋಜಕರು	02

35. ಸಿಬ್ಬಂದಿ ಶ್ರೇಣಿ ವಹಿ :

ನೆಲಮಂಗಲ ಯೋಜನಾ ಪ್ರಾಧಿಕಾರ ಕಛೇರಿಗೆ ವಿವಿಧ ಹುದ್ದೆಗಳು ಮಂಜೂರಾಗಿರುವ ಹಾಗೂ ಕಾಲ ಕಾಲಕ್ಕೆ ತಾತ್ಕಾಲಿಕ ಮಂಜೂರಾತಿಯನ್ನು ಮುಂದುವರೆಸುವ ಕುರಿತು ವಹಿಗಳನ್ನು ನಿರ್ವಹಿಸಲು ಹಿಂದಿನ ಸಾಲುಗಳ ಲೆಕ್ಕೆ ಪರಿಶೋಧನಾ ವರದಿಗಳಲ್ಲಿ ಸೂಚಿಸಿದ್ದರೂ ಯಾವುದೇ ಕ್ರಮವಹಿಸಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಲೆಕ್ಕ ತಪಾಸಣೆಗೆ ಹಾಜರುಪಡಿಸಿದ ದಾಖಲೆ ಯನ್ವಯ ಸಿಬ್ಬಂದಿಯ ಶ್ರೇಣಿಯ ವಿವರ ಈ ಕೆಳಕಂಡಂತೆ ಇರುತ್ತವೆ.

ಕ್ರ.ಸಂ	ಮಂಜೂರಾದ ಹುದ್ದೆಯ ವಿವರ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಹುದ್ದೆ
1.	ಉಪ ನಿರ್ದೇಶಕರು	01	01	–
2.	ಸಹಾಯಕ ನಗರ ಯೋಜಕರು	01	–	01
3.	ನಗರ ಯೋಜಕರು	02	01	01
4.	ಪ್ರಥಮ ದರ್ಜೆ ಸಹಾಯಕರು	01	01	–
5.	ಬೆರಳಚ್ಚುಗಾರರು	01	–	01
6.	ಗ್ರೂಪ್"ಡಿ"ನೌಕರರು	01	01	–
7.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01	01	–

36. ಪಿಂಚಣಿ ವಂತಿಕೆಯನ್ನು ಕಡಿಮೆ ಜಮೆ ಮಾಡಿರುವುದು :

ಕೆಸಿಎಸ್ಆರ್ ನಿಯಮ 427 ರಂತೆ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಯನ್ನು 1/8 ರಂತೆ ಲೆಕ್ಕಾಚಾರ ಮಾಡಿ ರಾಜ್ಯ ಸಂಚಿತ ನಿಧಿ ಪಾವತಿಸಬೇಕಾಗಿರುತ್ತದೆ. ಅದರಂತೆ 1–4–2016 ರಿಂದ 31–3–2017 ರವರೆಗೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಪಿಂಚಣಿ ವಂತಿಕೆ ಒಟ್ಟಾರೆ ರೂ.223658–00 ಗಳನ್ನು ಪಾವತಿಸಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

ದಿ:01–04–2016 ಕ್ಕೆ ಪ್ರಾರಂಭ ಶಿಲ್ಕು	1022345
2016–17 ನೇ ಸಾಲಿಗೆ ಪಾವತಿಸಬೇಕಾದ ಮೊತ್ತ	223658
ಒಟ್ಟು ರೂ.	**1246003**
2016–17 ರಲ್ಲಿ ಜಮಾ ಮಾಡಿರುವುದು	1022345
ದಿ:31–03–2017 ಕ್ಕೆ ಅಂತಿಮ ಶಿಲ್ಕು	223658

31–03–2017 ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ರೂ.223658–00 ಗಳನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.

37. ಖಾಸಗಿ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ನೌಕರರ ಸೇವೆಯನ್ನು ಪಡೆದು ಪಾವತಿಸಿರುವುದು:

ಈ ಪ್ರಾಧಿಕಾರದ ದೈನಂದಿನ ಕೆಲಸ ನಿರ್ವಹಣೆ ಕಾರ್ಯಗಳಿಗೆ ಈ ಕೆಳಕಂಡ ನೌಕರರ ಸೇವೆಯು ಅಗತ್ಯವಿದ್ದು, ಒಂದು ವರ್ಷದ ಅವಧಿಗೆ (01–04–2016 ರಿಂದ 31–03–2017 ವರೆಗೆ) ಖಾಸಗಿ ಸಂಸ್ಥೆಯಿಂದ ನೌಕರರ ಸೇವೆಯನ್ನು ಪಡೆಯುವಂತೆ ದಿನಾಂಕ:06–04–2016 ರಂದು ಪ್ರಾಧಿಕಾರದಲ್ಲಿ ನಡೆದ 78ನೇ ಸಭೆಯ ವಿಷಯ ಸಂಖ್ಯೆ.–9.7 ರಂತೆ ಅನುಮೋದನೆ ಪಡೆದು ಕಡಿಮೆ ದರ ನಮೂದಿಸಿದ ಮೆ:ಶ್ರೀಲಕ್ಷ್ಮೀವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ರವರಿಂದ

ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಪಡೆದು ವಾರ್ಷಿಕವಾಗಿ ರೂ.985228–00 ಗಳನ್ನು ಮಾಹೆಯವಾರು ಚೆಕ್ ಮುಖಾಂತರ ಸದರಿ ಸಂಸ್ಥೆಯವರಿಗೆ ಪಾವತಿ ಮಾಡಿ ವೆಚ್ಚ ಮಾಡಲಾಗಿದೆ.

ಕ್ರಸಂ	ಹುದ್ದೆ	ಹುದ್ದೆಯ ಸಂಖ್ಯೆ	ಪ್ರತಿ ಮಾಹೆಗೆ ಅನುಮೋದಿಸಲಾದ ದರ
1.	ಕಂಪ್ಯೂಟರ್ ಆಪರೇಟರ್ ಕಮ್ ಟೈಪಿಸ್ಟ್	02	13,500
2.	ಡಾಟಾ ಎಂಟ್ರಿ ಆಪರೇಟರ್	01	13,500
3.	ಗ್ರೂಪ್ 'ಡಿ' ನೌಕರ	01	9,720
4.	ಕಛೇರಿ ಸಹಾಯಕ (ಗ್ರೂಪ್ 'ಡಿ' ನೌಕರ)	01	9,720
5.	ಕಛೇರಿ ಸ್ವಚ್ಚತೆ ಸಿಬ್ಬಂದಿ	01	9,720
6.	Personal Assistant	01	13,500
7.	Dalayat (ಗ್ರೂಪ್ 'ಡಿ'ನೌಕರ)	01	9,720

38. ಸ್ಥಿರ ಚರಾಸ್ತಿ ವಹಿ ನಿರ್ವಹಣೆ ಮತ್ತು ವಾರ್ಷಿಕ ಪರಿಶೀಲನೆ:

ಪ್ರಾಧಿಕಾರದ ಸ್ಥಿರ ಮತ್ತು ಚರಾಸ್ತಿಗಳ ಬಗ್ಗೆ ವಹಿಯನ್ನು ನಿರ್ವಹಿಸಿ ಹಾಜರುಪಡಿಸಿದ್ದು, ಪ್ರಾಧಿಕಾರದಲ್ಲಿ ಚರಾಸ್ತಿ ಹಾಗೂ ಸ್ಥಿರ ಆಸ್ತಿಗಳ ಬಗ್ಗೆ ವಹಿಯಲ್ಲಿ ಖರೀದಿ ಮಾಡಿದ ದಿನಾಂಕ ಹಾಗೂ ಮೌಲ್ಯದ ಬಗ್ಗೆ ನಮೂದಿಸಿ ವರ್ಷಾಂತ್ಯದಲ್ಲಿ ಭೌತಿಕವಾಗಿ ಪರಿಶೀಲಿಸಿ ಧೃಢೀಕರಿಸಲು ಸೂಚಿಸಿದೆ.

39. ಲೆಕ್ಕ ಪರಿಶೋಧನಾ ಶುಲ್ಕದ ವಿವರ:

2016–17 ನೇ ಸಾಲಿನ ನೆಲಮಂಗಲ ಯೋಜನಾ ಪ್ರಾಧಿಕಾರದ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಲೆಕ್ಕ ಪರಿಶೋಧನಾ ಶುಲ್ಕದ ಲೆಕ್ಕ ಈ ಕೆಳಕಂಡಂತಿರುತ್ತದೆ.

1.		**ಒಟ್ಟು ಜಮಾ**	**732591491**	
2.		**ಕಳೆಯುವುದು**		
	1	ಮಾಹಿತಿ ಹಕ್ಕು ಕಾಯ್ದೆಯಡಿ ಶುಲ್ಕ	23000	
	2	ಬ್ಯಾಂಕ್ ಬಡ್ಡಿ	4947728	
	3	ಪರಿಪಕ್ವವಾದ ನಿಶ್ಚಿತ ಠೇವಣಿ ಮೊತ್ತ	682701476	
	4	ಬ್ಯಾಂಕಿಗೆ ಜಮೆ ಆಗದೇ ನೇರವಾಗಿ ಮರು ಹೂಡಿಕೆ		
	5	ವಿಜಯಾ ಬ್ಯಾಂಕ್ ಖಾತೆಯಿಂದ ಎಸ್.ಬಿ.ಎಂ ಖಾತೆಗೆ ಜಮಾ	500000	
		ಒಟ್ಟು ಉಳಿಯಬೇಕಾದ ಮೊತ್ತ		688151504
		ಉಳಿಕೆ ನಿವ್ವಳ ಜಮೆ ಮೊತ್ತ	44439987	
		ಖರ್ಚಿನ ಮೊತ್ತ	**634772176**	
	1	ನಿಶ್ಚಿತ ಠೇವಣಿ	622000000	
	2	ವಿಜಯಾ ಬ್ಯಾಂಕ್ ಖಾತೆಯಿಂದ ಎಸ್.ಬಿ.ಎಂ ಖಾತೆಗೆ ಜಮಾ	500000	
	3	ದೂರವಾಣಿ ವೆಚ್ಚ	63407	
	4	ವಿದ್ಯುತ್ ವೆಚ್ಚ	39026	

	5	ವಂತಿಕೆ 5%	1255257	
	6	ಮಾಹಿತಿ ಹಕ್ಕು	1560	
	7	ಟಿ.ಡಿ.ಎಸ್	152045	
	8	ಹಿಂದಿನ ಪಾವತಿ	8810	
	9	ಉಳಿಕೆ ಖರ್ಚಿನ ಮೊತ್ತ	624020105	10752071
		ಲೆಕ್ಕ ಪರಿಶೋಧನೆ ಶುಲ್ಕಕ್ಕೆ ಪರಿಗಣಿಸಬೇಕಾದ ಜಮ ಮತ್ತು ಖರ್ಚಿನ ಮೊತ್ತ ಮೊಬಲಗು	55192058	
		ಲೆಕ್ಕ ಪರಿಶೋಧನಾ ಶುಲ್ಕ	55192058 x 0.20 / 100	
		2016–17 ನೇ ಸಾಲಿಗೆ ಲೆಕ್ಕ ಪರಿಶೋಧನಾ ಶುಲ್ಕ ರೂ.110384		

2016–17 ನೇ ಸಾಲಿನ ಅಂತ್ಯಕ್ಕೆ ಲೆಕ್ಕ ಪರಿಶೋಧನಾ ಶುಲ್ಕದ ಘೋಷ್ವಾರೆ ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ಮೊತ್ತ
1.	ದಿ:01–04–2016 ಕ್ಕೆ ಪ್ರಾರಂಭಿಕ ಬಾಕಿ	174745
2.	2016–17 ನೇ ಸಾಲಿನಲ್ಲಿ ಪಾವತಿಸಬೇಕಾದ ಮೊತ್ತ	110384
3.	**ಒಟ್ಟು ಮೊತ್ತ**	**285129**
4.	2016–17 ನೇ ಸಾಲಿನಲ್ಲಿ ಪಾವತಿಸಲಾದ ಮೊತ್ತ	–
5.	ದಿ:31–03–2017 ಕ್ಕೆ ಬಾಕಿ ಇರುವ ಅಖೈರು ಶಿಲ್ಕು	285129

31–03–2017 ರ ಅಂತ್ಯಕ್ಕೆ ಬಾಕಿ ಇರುವ ಲೆಕ್ಕ ತನಿಖಾ ಶೂಲ್ಕ ರೂ.285129–00 ಗಳನ್ನು ಲೆಕ್ಕ ಶೀರ್ಷಿಕೆ: 0070–60–110–0–01 ಚಲನ್ ಮೂಲಕ ಭರ್ತಿ ಮಾಡಿ ಸಂದಾಯದ ಚಲನ್ ಪ್ರತಿಯನ್ನು ಹಿರಿಯ ನಿರ್ದೇಶಕರ ಕಛೇರಿಗೆ ಕಳುಹಿಸುವಂತೆ ಸೂಚಿಸಿದೆ.

40. ಸಾಮಾನ್ಯ ಅಭಿಪ್ರಾಯ:

1. ಪ್ರಾಧಿಕಾರದ ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಅಗತ್ಯವಾಗಿರುತ್ತದೆ.
2. ದಿನವಹಿಯನ್ನು ನಿಯಮ ರೀತ್ಯ ನಿರ್ವಹಿಸುವುದು.
3. ಸಿಎ ನಿವೇಶನಗಳಿಗಾಗಿ ಮೀಸಲಿಟ್ಟ ಜಾಗಗಳನ್ನು ಪ್ರಾಧಿಕಾರದ ಸ್ವತ್ತು ಎಂಬ ನಾಮಫಲಕ ಹಾಕಿ ತಂತಿಬೇಲಿ ನಿರ್ವಸುವ ಬಗ್ಗೆ ಅಗತ್ಯ ಕ್ರಮವಹಿಸುವುದು.
4. ಸಿಬ್ಬಂದಿ ಶ್ರೇಣಿ ವಹಿ ನಿರ್ವಹಿಸಿ ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸುವುದು.
5. ಲೆಕ್ಕ ಪರಿಶೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ ಕ್ರಮವಹಿಸುವುದು.
6. ಬಡಾವಣೆ ನಕ್ಷೆ ಅನುಮೋದನೆ ನೀಡುವಾಗ ನಿಯಮಾನುಸಾರ ಉತ್ತಮತೆ ಶುಲ್ಕ ವಸೂಲಿಸುವುದು.

ಸಹಿ/–
ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬೆಂಗಳೂರು

ಅನುಬಂಧ –1

ದಿನಾಂಕ:31–03–2017 ಕ್ಕೆ ನಗದಾಗದಿರುವ ಚೆಕ್‌ಗಳ ವಿವರ

ಕ್ರ.ಸಂ	ಚೆಕ್ ಸಂಖ್ಯೆ	ದಿನಾಂಕ	ಮೊಬಲಗು
1.	533092	03–02–2017	200–00
2.	533094	03–02–2017	200–00
3.	533191	06–03–2017	15,750–00
4.	422928	15–03–2017	200–00
5.	422929	15–03–2017	200–00
6.	422930	15–03–2017	200–00
		ಒಟ್ಟು	**16,750–00**

ಸಹಿ/–

ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಅನುಬಂಧ–2

ನೆಲಮಂಗಲ ಯೋಜನಾ ಪ್ರಾಧಿಕಾರ					
2016–17 ನೇ ಸಾಲಿನ ಜಮೆ ಮತ್ತು ಖರ್ಚು ವಿವರ					
ಕ್ರ.ಸ	ಜಮೆ	ಮೊತ್ತ	ಕ್ರ.ಸ	ಖರ್ಚು	ಮೊತ್ತ
1.	ಉತ್ತಮತೆ ಶುಲ್ಕ	1,56,50,195	1.	ಅಧಿಕಾರಿ/ಸಿಬ್ಬಂದಿ ವೇತನ	41,09,549
2.	ಪರಿಶೀಲನಾ ಶುಲ್ಕ	2,20,450	2.	ಅಧ್ಯಕ್ಷರ ಗೌರವಧನ	1,28,129
3.	ಉಸ್ತುವಾರಿ ಶುಲ್ಕ	69,000	3.	ದೂರವಾಣಿ ವೆಚ್ಚ	63,407
4.	ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ದಾಖಲಾತಿ ನೀಡುವ ಶುಲ್ಕ	12,188	4.	ವಿದ್ಯುತ್ ವೆಚ್ಚ (KEB)	39,026
5.	ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕೃತವಾದ ಅರ್ಜಿ ಶುಲ್ಕ	2,300	5.	ಗಣಕ ಯಂತ್ರದ ಪ್ರಿಂಟರ್‌ಗಳಿಗೆ ಕಾಟ್ರಿಡ್ಜ್ ಖರೀದಿ ಬಾಬ್ತು	22,777
6.	ಭದ್ರತಾ ಠೇವಣಿ ಶುಲ್ಕ	53,79,550	6.	ಜೆರಾಕ್ಸ್ ಯಂತ್ರದ ಟೋನರ್ ಕಾಟ್ರಿಡ್ಜ್ ಖರೀದಿ ಹಾಗೂ ದುರಸ್ತಿ ಬಾಬ್ತು	41,871
7.	ಧೃಢೀಕೃತ ನಕ್ಷೆ / ದಾಖಲಾತಿ ನೀಡುವ ಶುಲ್ಕ	25,624	7.	ಬಾಡಿಗೆ ಆಧಾರದ ವಾಹನ ಬಾಬ್ತು	11,67,578
8.	ವಿಭಜನೆ ಶುಲ್ಕ	1,150	8.	ಕಛೇರಿ ಕೈ ಹಣ	67,399
9.	ಕೆರೆಗಳ ಸಂರಕ್ಷಣೆ ಶುಲ್ಕ ಹಾಗೂ ಕೆರೆಗಳ ಸಂರಕ್ಷಣೆ ಶುಲ್ಕದ ಬಡ್ಡಿ	2,12,81,200	9.	ಅಂಚೆ ಚೀಟಿ ಖರೀದಿ ಬಾಬ್ತು	16,000
10.	ಬ್ಯಾಂಕ್ ಬಡ್ಡಿ ಬಾಬ್ತು	49,47,728	10.	ಕರ್ನಾಟಕ ರಾಜ್ಯ ಪತ್ರ ಸಾರ್ವಜನಿಕ ಪ್ರಕಟಣೆ ಬಾಬ್ತು	1,790
11.	M.P(P) Map, CD,Z.R & A3 size colour map book ಮಾರಾಟ	1,200	11.	ಹೊರಗುತ್ತಿಗೆ ನೌಕರರ ವೇತನ ಪಾವತಿ	9,85,228
12.	ಇತರೆ	1,930	12.	ಪ್ರಿಂಟಿಂಗ್ / ಮುದ್ರಣ ವೆಚ್ಚ	40,250
13.	ದಂಡ	17,97,500	13.	ಲೇಖನಾ ಸಾಮಗ್ರಿ ವೆಚ್ಚ	34,562
14.	ಪ್ರಾಧಿಕಾರದ ವಿಜಯಾ ಬ್ಯಾಂಕ್ ಖಾತೆಯಿಂದ ಎಸ್.ಬಿ.ಎಂ ಖಾತೆಗೆ ಜಮೆ ಮಾಡಲಾದ ಮೊತ್ತ	5,00,000	14.	ಪೀಠೋಪಕರಣ ಖರೀದಿ ಬಾಬ್ತು	2,92,128
15.	ಪಕ್ವವಾದ ನಿಶ್ಚಿತ ಠೇವಣಿ ಮೊತ್ತ ಖಾತೆಗೆ ಜಮೆ	68,27,01,476	15.	ವಕೀಲರ ಬಿಲ್ ಪಾವತಿ	36,450
			16.	ಉತ್ತಮತೆ ಶುಲ್ಕದ ಶೇ.5 ರಷ್ಟು ಮೊತ್ತ KSTPB ಗೆ ಪಾವತಿಸಿದ ಬಾಬ್ತು	12,55,257
			17.	ಮಾಹಿತಿ ಹಕ್ಕು ಶುಲ್ಕ ಪಾವತಿ	1,560
			18.	IT/ TDS ಪಾವತಿ	1,52,045
			19.	DSC Key ವೆಚ್ಚ	2,500
			20.	ಹಿಂಪಾವತಿ	8,810
			21.	ವಿನ್ಯಾಸ ಅರ್ಜಿದಾರರಿಗೆ ಶುಲ್ಕ ಹಿಂಪಾವತಿ	24,950
			22.	Satellite image ಪಡೆಯುವ ಸಂಬಂಧ ಬಿಎಂಆರ್‌ಡಿಎಗೆ ಪಾವತಿಸಲಾದ ಬಾಬ್ತು	34,82,652
			23.	Window Blinds ಅಳವಡಿಸಿದ ಬಾಬ್ತು	19,620
			24.	ಸ್ವಂತ ಕಛೇರಿ ಕಟ್ಟಡದಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ಮಾಡಿಸಿದ ವೆಚ್ಚ	1,73,952
			25.	EPABX Repair ಮಾಡಿಸಿದ ವೆಚ್ಚ	14,847

			26.	UPS Repair & Battery ಖರೀದಿ ವೆಚ್ಚ	67,007
			27.	ಸದಸ್ಯರ ಉಪಸ್ಥಿತಿ ಭತ್ಯೆ ಪಾವತಿ	5,800
			28.	ತರಬೇತಿ ವೆಚ್ಚ	11,500
			29.	ಇತರೆ	5,532
			30.	ಪ್ರಾಧಿಕಾರದ ವಿಜಯಾ ಬ್ಯಾಂಕ್ ಖಾತೆಯಿಂದ ಎಸ್.ಬಿ.ಎಂ ಖಾತೆಗೆ ಜಮೆ ಮಾಡಲಾದ ಮೊತ್ತ	5,00,000
			31	ನಿಶ್ಚಿತ ಠೇವಣಿ ಮೊತ್ತ	62,20,00,000
	ಒಟ್ಟು ಜಮೆ	**73,25,91,491**		**ಒಟ್ಟು ಖರ್ಚು**	**63,47,72,176**
	ಪ್ರಾರಂಭಿಕ ಶಿಲ್ಕು (ನಗದು ಪುಸ್ತಕದಂತೆ)	**1,90,45,189**		**ಅಂತಿಮ ಶಿಲ್ಕು (ನಗದು ಪುಸ್ತಕದಂತೆ)**	**11,68,64,504**
	ಒಟ್ಟು ಜುಮ್ಲಾ	**75,16,36,680**		**ಅಖೈರು ಶಿಲ್ಕು**	**75,16,36,680**

ಸಹಿ/–

ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಅನುಬಂಧ–3

ನೆಲಮಂಗಲ ಯೋಜನಾ ಪ್ರಾಧಿಕಾರ,

ನೆಲಮಂಗಲ 2016–17 ನೇ ಸಾಲಿನಲ್ಲಿ ಪ್ರಾಧಿಕಾರದಿಂದ ವಿವಿಧ ಬ್ಯಾಂಕ್‌ಗಳಲ್ಲಿ ದಿನಾಂಕ:23–05–2017 ರಲ್ಲಿದ್ದಂತೆ ವಿವಿಧ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇಡಲಾಗಿರುವ ಬಾಬ್ತುಗಳ ವಿವರ

ಕ್ರ.ಸ	ಠೇವಣಿ ಇಟ್ಟಿರುವ ಬ್ಯಾಂಕ್ ಹೆಸರು ಮತ್ತು ವಿಳಾಸ	ನಿಶ್ಚಿತ ಠೇವಣಿ ಸಂಖ್ಯೆ	ಠೇವಣಿ ಮಾಡಲಾದ ಮೊತ್ತ	ಠೇವಣಿ ಮಾಡಿದ ದಿನಾಂಕ	ಪರಿಪಕ್ವವಾಗುವ ದಿನಾಂಕ	ಶೇಕಡವಾರು ಬಡ್ಡಿದರ	ಠೇವಣಿ ಇಟ್ಟಿರುವ ಅವಧಿ	ಪರಿಪಕ್ವವಾಗುವ ಮೊತ್ತ	ಷರಾ (ಠೇವಣಿ ವಹಿಯಂತೆ ಕ್ರ.ಸಂ)
1	ಕೆನರಾ ಬ್ಯಾಂಕ್, ನೆಲಮಂಗಲ	182699 Ac No.044 5401003174/1	90,00,000–00	17–06–2016	17–06–2017	7.5%	12 ತಿಂಗಳು	96,94,222–00	114
2	ಕೆನರಾ ಬ್ಯಾಂಕ್, ನೆಲಮಂಗಲ	182701 Ac No. 0445 401003175/1	90,00,000–00	17–06–2016	17–06–2017	7.5%	12 ತಿಂಗಳು	96,94,222–00	115
3	ಕೆನರಾ ಬ್ಯಾಂಕ್, ನೆಲಮಂಗಲ	182702 Ac No.0445 401003176/1	70,00,000–00	17–06–2016	17–06–2017	7.5%	12 ತಿಂಗಳು	75,39,951–00	116
4	ಕಾವೇರಿ ಗ್ರಾಮೀಣ ಬ್ಯಾಂಕ್, ನೆಲಮಂಗಲ	No.KGB / SCR. 612227 Ac No.850 41571746	15,00,00,000–00	29–09–2016	29–09–2017	8%	12 ತಿಂಗಳು	16,23,64,824–00	117
5	ಸಿಂಡಿಕೇಟ್ ಬ್ಯಾಂಕ್, ನೆಲಮಂಗಲ	No.SBL.6274 51 Ac No.0490 4580000066/1	4,90,00,000–00	06–03–2017	06–03–2018	6.50%	12 ತಿಂಗಳು	5,22,63,478–83	118
6	ಸಿಂಡಿಕೇಟ್ ಬ್ಯಾಂಕ್, ನೆಲಮಂಗಲ	No.SBL.6274 67	4,90,00,000–00	21–03–2017	21–03–2018	6.50%	12 ತಿಂಗಳು	5,22,63,478–83	119

		Ac No04904 580000066/2							
7	ಕಾರ್ಪೊರೇಷನ್ ಬ್ಯಾಂಕ್, ನೆಲಮಂಗಲ	582555 Ac No.53040 1006839854/ 1000158848	9,90,00,000–00	20–03–2017	20–03–2018	5.80%	12 ತಿಂಗಳು	10,48,68,100–00	120
		ಒಟ್ಟು	**37,20,00,000–00**	**–**	**–**	**–**	**–**	**39,86,88,276–66**	**–**

ಸಹಿ/–

ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಅನುಬಂಧ–4

ನೆಲಮಂಗಲ ಯೋಜನಾ ಪ್ರಾಧಿಕಾರ

ಲೆಕ್ಕ ವಿಚಾರಣೆ ಪತ್ರ ಸಂಖ್ಯೆ:03:2016–17 ಕ್ಕೆ ಉತ್ತರ :

ಪ್ರಾಧಿಕಾರದಿಂದ 2016–17 ನೇ ಸಾಲಿನಲ್ಲಿ ಕೆಳಕಂಡ ಮೊತ್ತಗಳಿಗೆ ಸಂಬಂಧಿಸಿದಂತೆ ಸ್ವಂತ ಚೆಕ್‌ಗಳ ಮೂಲಕ ಹಣ ಡ್ರಾ ಮಾಡಲಾಗಿದ್ದು, ಸದರಿ ಚೆಕ್‌ಗಳ ಮೂಲಕ ವಿವಿಧ ಉದ್ದೇಶಗಳಿಗೆ ಹಣ ಡ್ರಾ ಮಾಡಿರುವ ವಿವರಗಳನ್ನು ಕೆಳಕಂಡಂತೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

1. ಪ್ರಾಧಿಕಾರದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು / ನೌಕರರ ಪ್ರತಿ ಮಾಹೆಯ ವೇತನ ದಲ್ಲಿ ಕಡಿತಗೊಳಿಸಲಾಗುವ ಸಾಮಾನ್ಯ ಭವಿಷ್ಯ ನಿಧಿ ವಂತಿಕೆಯನ್ನು (ಜಿಪಿಎಫ್) ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ ಎಸ್‌ಬಿಎಂ, ಖಜಾನೆ ಶಾಖೆ, ನೆಲಮಂಗಲ ಇಲ್ಲಿ ನಿಗಧಿತ ಚಲನ್ ಮೂಲಕ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಹಣ ಜಮೆ ಮಾಡಿ ಸದರಿ ಚಲನ್ನಿನ ಮೂಲ ಪ್ರತಿಯನ್ನು ಮಹಾಲೇಖಪಾಲರು, ಸಾಮಾನ್ಯ ಭವಿಷ್ಯ ನಿಧಿ, ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ. ಈ ಸಂಬಂಧ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಲಾಗಿರುತ್ತದೆ.

2. ಸರ್ಕಾರದ ಆದೇಶ ಸಂಖ್ಯೆ.ಆಇ:01:ಟಿಸಿಇ:2012 ದಿ:21–06–2012 ರಲ್ಲಿ ಕಛೇರಿಗಳಲ್ಲಿ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸುವ ಸಲುವಾಗಿ ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮಗಳ ನಿಯಮ 55 (49) (ಎ) ರಲ್ಲಿನ ರೂ.500 ಗಳ ಮಿತಿಯನ್ನು ರೂ.5000–00 ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ. ಆದ್ದರಿಂದ ಪ್ರಾಧಿಕಾರದಲ್ಲಿ ಪ್ರಸ್ತುತ ರೂ.5,000–00 ಗಳನ್ನು ಖಾಯಂ ಮುಂಗಡವಾಗಿ ಕಛೇರಿ ಕೈ ಹಣವನ್ನು ಪ್ರಾಧಿಕಾರದ ಕಛೇರಿ ಆದೇಶ ಸಂಖ್ಯೆ.ನೆಯೋಪ್ರಾ:ಸಿಬ್ಬಂದಿ:ಕಛೇರಿ ಕೈ ಹಣ:2015–16 ದಿನಾಂಕ:25–02–2016 ರಲ್ಲಿ ನಿಗದಿಪಡಿಸಲಾಗಿರುತ್ತದೆ. ಪ್ರಾಧಿಕಾರದ ಅವಶ್ಯಕತೆಗೆ ಅನುಗುಣವಾಗಿ / ಸಾಮಗ್ರಿ ಖರೀದಿ / ನಕ್ಷೆಗಳ ಜೆರಾಕ್ಸ್ / ಮಾಸ್ಟರ್ ಪ್ಲಾನ್ ಪ್ರಿಂಟ್ ಹಾಗೂ ಇನ್ನಿತರೆ ಕಾರ್ಯಗಳಿಗೆ ಸದರಿ ಕೈ ಹಣವನ್ನು ಸರ್ಕಾರದ ಆದೇಶದಂತೆ ಉಪಯೋಗಿಸಿಕೊಳ್ಳಲು ಕಛೇರಿ ಕೈ ಹಣದಲ್ಲಿ ವೆಚ್ಚ ಮಾಡಲಾದ ಮೊತ್ತಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ಸಂಬಂಧ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಲಾಗಿರುತ್ತದೆ.

3. ಪ್ರಾಧಿಕಾರದ ಕಾಗದ ಪತ್ರಗಳನ್ನು ರವಾನಿಸುವ ಸಲುವಾಗಿ ಅಂಚೆ ಚೀಟಿಗಳು ಅವಶ್ಯಕವಾಗಿದ್ದು, ಸದರಿ ಅಂಚೆ ಚೀಟಿಗಳನ್ನು ಖರೀದಿಸುವ ಸಲುವಾಗಿ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ ಸದರಿ ಮೊತ್ತದ ಅಂಚೆ ಚೀಟಿಗಳನ್ನು ಖರೀದಿಸಲಾಗಿರುತ್ತದೆ.

ಕ್ರ.ಸಂ	ಚೆಕ್ ಸಂಖ್ಯೆ	ಚೆಕ್ ದಿನಾಂಕ	ಮೊಬಲಗು (ರೂ.ಗಳಲ್ಲಿ)	ಷರಾ (ಡ್ರಾ ಮಾಡಲಾದ ಉದ್ದೇಶ)
1.	823862	06–04–2016	4,790	ಕಛೇರಿ ಕೈ ಹಣ
2.	823864	07–04–2016	2,000	ಸ್ಟಾಂಪ್
3.	823869	13–04–2016	39,000	ಜಿಪಿಎಫ್ ವಂತಿಕೆ
4.	823873	21–04–2016	4,795	ಕಛೇರಿ ಕೈ ಹಣ
5.	823886	18–05–2016	38,000	ಜಿಪಿಎಫ್ ವಂತಿಕೆ
6.	823887	20–05–2016	4,880	ಕಛೇರಿ ಕೈ ಹಣ
7.	823890	26–05–2016	4,989	ಕಛೇರಿ ಕೈ ಹಣ
8.	823901	08–06–2016	41,000	ಜಿಪಿಎಫ್ ವಂತಿಕೆ
9.	823904	08–06–2016	3,000	ಜಿಪಿಎಫ್ ವಂತಿಕೆ
10.	823905	14–06–2016	2,000	ಸ್ಟಾಂಪ್

11.	823908	16–06–2016	4,529	ಕಛೇರಿ ಕೈ ಹಣ
12.	823909	17–06–2016	1,560	ಆರ್‌ಟಿಐ
13.	823919	06–07–2016	2,000	ಸ್ಟಾಂಪ್
14.	823925	16–07–2016	41,000	ಜಿಪಿಎಫ್ ವಂತಿಕೆ
15.	095751	18–07–2016	4,690	ಕಛೇರಿ ಕೈ ಹಣ
16.	095756	22–07–2016	4,829	ಕಛೇರಿ ಕೈ ಹಣ
17.	095763	04–08–2016	2,000	ಸ್ಟಾಂಪ್
18.	095764	05–08–2016	4,858	ಕಛೇರಿ ಕೈ ಹಣ
19.	095772	11–08–2016	41,000	ಜಿಪಿಎಫ್ ವಂತಿಕೆ
20.	095782	29–08–2016	4,775	ಕಛೇರಿ ಕೈ ಹಣ
21.	095790	12–09–2016	41,000	ಜಿಪಿಎಫ್ ವಂತಿಕೆ
22.	095791	12–09–2016	2,000	ಸ್ಟಾಂಪ್
23.	095802	03–10–2016	4,840	ಕಛೇರಿ ಕೈ ಹಣ
24.	095810	19–10–2016	41,000	ಜಿಪಿಎಫ್ ವಂತಿಕೆ
25.	095822	03–11–2016	2,000	ಸ್ಟಾಂಪ್
26.	095824	04–11–2016	4,661	ಕಛೇರಿ ಕೈ ಹಣ
27.	095827	26–11–2016	4,950	ಕಛೇರಿ ಕೈ ಹಣ
28.	095839	14–12–2016	2,000	ಸ್ಟಾಂಪ್
29.	095843	02–01–2017	4,961	ಕಛೇರಿ ಕೈ ಹಣ
30.	533085	30–01–2017	24,000	ಜಿಪಿಎಫ್ ವಂತಿಕೆ
31.	533176	10–02–2017	2,000	ಸ್ಟಾಂಪ್
32.	533181	16–02–2017	19,000	ಜಿಪಿಎಫ್ ವಂತಿಕೆ
33.	533182	17–02–2017	4,852	ಕಛೇರಿ ಕೈ ಹಣ
34.	533192	06–03–2017	34,000	ಜಿಪಿಎಫ್ ವಂತಿಕೆ
35.	533200	08–03–2017	40,000	ಜಿಪಿಎಫ್ ವಂತಿಕೆ
36.	422931	16–03–2017	31,000	ಜಿಪಿಎಫ್ ವಂತಿಕೆ
37.	422937	22–03–2017	31,000	ಜಿಪಿಎಫ್ ವಂತಿಕೆ

ಸಹಿ/–

ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಅನುಬಂಧ–5

ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ವಸತಿ ವಿನ್ಯಾಸಗಳಲ್ಲಿ ನವೀಕರಣ ಪಡೆಯದೇ ವಿನ್ಯಾಸವನ್ನು ಅಭಿವೃದ್ಧಿಪಡಿಸದೇ ಇರುವ ವಿನ್ಯಾಸಗಳ ವಿವರ

ಕ್ರ ಸಂ	ವಿನ್ಯಾಸ ಮಾಲೀಕರ ಹೆಸರು ಮತ್ತು ವಿಳಾಸ	ತಾಲ್ಲೂಕು, ಹೋಬಳಿ, ಗ್ರಾಮ,	ಸರ್ವೆ ನಂಬರ್	ಒಟ್ಟು ವಿಸ್ತೀರ್ಣ ಎ–ಗು	ಕಡತದ ಸಂಖ್ಯೆ ಮತ್ತು ಅನುಮೋದನೆ ದಿನಾಂಕ	ಒಟ್ಟು ನಿವೇಶನ ಸಂಖ್ಯೆ	ಶೇಕಡ 60%	ಶೇಕಡ 40%
				2004–05				
1	ಶ್ರೀ ಎನ್. ನಂಜುಂಡಯ್ಯ (ಜಿಪಿಎದಾರರು) ನಂ.34, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ನೇತ್ರಾವತಿ ನಗರ, ಬೆಂಗಳೂರು–21	ನೆಲಮಂಗಲ ಕಸಬಾ ಅರಿಶಿನಕುಂಟೆ	94/7, 94/4ಎ, 94/4ಬಿ, 95/1ಎ, ಬಿ, 93/6, 94/6, 94/5, 94/8	08–39	**LAO:02:2004-05** 31–08–2004	165	ದಿನಾಂಕ:31–08–2004 ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
2	ಶ್ರೀ ಆರ್.ಎಸ್. ಮೂರ್ತಿ, ನಂ.958, 2ನೇ ಮುಖ್ಯರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–21	ನೆಲಮಂಗಲ ಕಸಬಾ ಗೋರಿನಬೆಲೆ	45/3, 45/4, 45/7,	08–30.5	**LAO:04:2004-05** 10–11–2005	142	ದಿನಾಂಕ:10–11–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
3	ಶ್ರೀ ಬಿ.ವಿ.ಉಮಾಕಾಂತ್, ನಂ.37/79, 2ನೇ ಬ್ಲಾಕ್, 20ನೇ ಮೈನ್, ವೆಸ್ಟ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು–21	ಬೆಂಗಳೂರು ಉತ್ತರ ದಾಸನಪುರ ಗೌಡಹಳ್ಳಿ	81 64/1 64/2ಎ	10–04	**LAO:06:2004-05** 29–11–2005	152	ದಿನಾಂಕ:29–11–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
4	ಶ್ರೀ ಆರ್. ರಾಜು, ನಂ.113, ಕತ್ರಿಗುಪ್ಪೆ,ಬನಶಂಕರಿ 3ನೇ ಹಂತ, ಬೆಂಗಳೂರು–85	ಬೆಂಗಳೂರು ಉತ್ತರ ದಾಸನಪುರ ಹುಲ್ಲೇಗೌಡನ ಹಳ್ಳಿ	96	12–00	**LAO:10:2004-05** 23–02–2005	195	ದಿನಾಂಕ:23–02–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
5	ಶ್ರೀ ಭರತ್ ಆರ್. ಗಜಾರಿಯಾ, ಕಸಬಾ ಹೋಬಳಿ, ಕೆಂಪಲಿಂಗನಹಳ್ಳಿ ಗ್ರಾಮ ನೆಲಮಂಗಲ ತಾಲ್ಲೂಕು	ನೆಲಮಂಗಲ ಕಸಬಾ ಕೆಂಪಲಿಂಗನ ಹಳ್ಳಿ	3, 60/2 60/5, 60/6, 60/7, 60/8	12–12.5	**LAO:11:2004-05** 25–01–2006	209	ದಿನಾಂಕ:25–01–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
				2005–06				
6	ಶ್ರೀಮತಿ ಲಕ್ಷ್ಮಮ್ಮ, ಚಿಕ್ಕವೀರಯ್ಯ, ವಿಶ್ವೇಶ್ವರಪುರ, ನೆಲಮಂಗಲ ತಾಲ್ಲೂಕು.	ನೆಲಮಂಗಲ ಕಸಬಾ ವಿಶ್ವೇಶ್ವರಪುರ	15/2	03–17	**LAO:03:2005-06** 10–08–2005	64	ದಿನಾಂಕ:10–08–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
7	ಶ್ರೀ ಎಸ್.ಪಿ.ಚಿದಾನಂದ ಮತ್ತು ಇತರರು, ಸಂತೃಪ್ತಿ, ಪಿ.ಬಿ.ಬಡಾವಣೆ, ಉಪ್ಪಾರಹಳ್ಳಿ ಗೇಟ್, ತುಮಕೂರು	ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಕಡಬಗೆರೆ	78/1, 78/2	15–14	**LAO:04:2005-06** 12–08–2005	265	ದಿನಾಂಕ:12–08–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ

8	ಶ್ರೀ ಎನ್.ನಂಜುಂಡಯ್ಯ, ಕಣ್ವ ಡೆವಲಪರ್ಸ್, (ಕೃಷ್ಣಮೂರ್ತಿ ಜಯಮ್ಮ, ಶಾರದಮ್ಮ, ಶಿವಕುಮಾರ್ ಜಿಪಿಎ ಹೋಲ್ಡರ್) ನಂ.60, 1ನೇ ಮಹಡಿ, ಲಾಂಗ್ ಫೋರ್ಸ್ಟ್ ರಸ್ತೆ, ಬೆಂಗಳೂರು–25	ಬೆಂಗಳೂರು ಉತ್ತರ ದಾಸನಪುರ ಶೇಷಗಿರಿ ರಾವ್‌ಪಾಳ್ಯ ಮತ್ತು ಪಿಳ್ಳಪಳ್ಳಿ	6/1, 4/1, 3/1 55/3, 55/4 56/1	24–21	**LAO:10:2005-06** 27–10–2005	353	ದಿನಾಂಕ:27–10–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
9	ಶ್ರೀಮತಿ ಗೌರಮ್ಮ, ನಂ.145, 4ನೇ ಬ್ಲಾಕ್, 3ನೇ ಹಂತ, ಡಬ್ಲ್ಯೂ ಜೆ.ಸಿ. ರೋಡ್, ಬೆಂಗಳೂರು	ಬೆಂಗಳೂರು ಉತ್ತರ ದಾಸನಪುರ ಬೆತ್ತನಗೆರೆ	26/2	02–00	**LAO:12:2005-06** 21–09–2005	38	ದಿನಾಂಕ:21–09–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
10	ಶ್ರೀ ಕೆ.ಆರ್. ಕಣ್ಣನ್ , ನಂ.71, 2ನೇ ಅಡ್ಡರಸ್ತೆ, ಸೆಂಟ್ರಲ್ ಎಕ್ಸಸೈಜ್ ಲೇಔಟ್, ವಿಜಯನಗರ, ಬೆಂಗಳೂರು.	ಬೆಂಗಳೂರು ಉತ್ತರ ದಾಸನಪುರ ಹುಸ್ಕೂರು	140/5ಎ 139/3ಬಿ 139/1 139/3 139/4 139/5 144/3	07–07	**LAO:14:2005-06** 19–07–2005	88	ದಿನಾಂಕ:19–07–2005 ರಂದು ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ	ಶೇ 40% ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುವುದಿಲ್ಲ
